Navachethana education YouTube & telegram channel Copy Rights Reserved

NAVACHETANA EDUCATIONS
7019752139

# 1.ಜಗತ್ತಿನ ಪ್ರಮುಖ ಘಟನೆಗಳು

ಇಂದು ಜಗತ್ತಿನಲ್ಲಿ ವ್ಯಾಪಕವಾಗಿ ಪ್ರಚಲಿತದಲ್ಲಿರುವ ಮತಗಳಲ್ಲಿ, ಕ್ರೈಸ್ತ ಮತ್ತು ಇಸ್ಲಾಂ ರಿಲಿಜನ್ ಗಳನ್ನು ಹೆಸರಿಸಬಹುದು.

1. ಕ್ರೈಸ್ತ ಧರ್ಮ ಸ್ಥಾಪಕ ಯಾರು - ಯೇಸುಕ್ರಿಸ್ತ

2. ಕ್ರೈಸ್ತಮತದ ಮೂಲಗ್ರಂಥ ಯಾವುದು - 'ಬೈಬಲ್'

3.'ಕ್ರೈಸ್ಟ್' ಪದದ ಅರ್ಥ - 'ರಕ್ಷಕ'

4.ಯೇಸುಕ್ರಿಸ್ತನ ಜೀವನಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ

A. ಯೇಸು ಬೆತ್ಲಹಂ (ಇಸ್ರೇಲ್) ಎಂಬಲ್ಲಿ ಮೇರಿ ಎಂಬಾಕೆಯ ಮಗನಾಗಿ ಜನಿಸಿದರು. ಅವರಿಗೆ ಸುಮಾರು ಮೂವತ್ತು ವರ್ಷವಾದಾಗ ಮನೆಯಿಂದ ಹೊರಟು ಬಡವರು ಮತ್ತು ದೀನರ ಸೇವೆ ಮಾಡತೊಡಗಿದರು.☑

B. ಕರುಣೆಯೇ ಧರ್ಮದ ಮೂಲವೆಂದು, ಕತೆಗಳ ಮೂಲಕ ಉದಾಹರಣೆ ನೀಡಿ ಉಪದೇಶ ಮಾಡುತ್ತಿದ್ದರು.☑

C. ಯೇಸುವಿನ ಅನುಯಾಯಿಗಳು ಹೆಚ್ಚಿದಂತೆ ಅವರ ವಿರೋಧಿಗಳ ಸಂಖ್ಯೆಯೂ ಹೆಚ್ಚಿತು.ಧಾರ್ಮಿಕ ಮುಂದಾಳುಗಳು ಯೇಸುವನ್ನು ವಿರೋಧಿಸಿದರು.☑

D. ಯೇಸು ರಾಜದ್ರೋಹಿಯೆಂಬ ತಪ್ಪು ಹೊರಿಸಿ, ಅವರನ್ನು ಶಿಲುಬೆಗೆ ಏರಿಸಿದರು. (ಅಪರಾಧಿಗಳಿಗೆ ಆ ಕಾಲದಲ್ಲಿ ನೀಡುತ್ತಿದ್ದ ಮರಣ ದಂಡನೆಯೆಂದರೆ ಶಿಲುಬೆಗೇರಿಸುವುದು).☑

**ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿವೆ**



Scanned with OKEN Scanner

Navachethana education YouTube & telegram channel Copy Rights Reserved

5.ನಾವೆಲ್ಲ ದೇವರ ಮಕ್ಕಳು; ನಾವೆಲ್ಲ ಸಹೋದರರು ಎಂದು ಯೇಸು ಸಾರಿ ಹೇಳಿದರು.

6.ಇಟಲಿಯ ರೋಮ್ ನಗರವು ಕ್ರೈಸ್ತರ ಮುಖ್ಯ ಕೇಂದ್ರವಾಗಿ ಬೆಳೆಯಿತು.

7. ರೋಮನ್ ಕ್ಯಾಥೊಲಿಕ್ ಚರ್ಚ್ ಒಂದು ಪ್ರಬಲ ಸಂಘಟನೆಯಾಗಿ ಬೆಳೆಯಿತು.

8. ಇಸ್ಲಾಂ ರಿಲಿಜನ್‌ನ ಸ್ಥಾಪಕ- ಮಹಮ್ಮದ್ ಪೈಗಂಬರ

9. ಮಹಮ್ಮದ್ ಪೈಗಂಬರರು ಜನಿಸಿದ ಸ್ಥಳ - ಅರಬ್ ದೇಶದ ಮೆಕ್ಕಾ

10. ಪೈಗಂಬರ ಎಂದರೆ ದೇವರ ಸಂದೇಶವನ್ನು ಸಾರುವವರು: ಪ್ರವಾದಿ.

11. ಮುಸಲ್ಮಾನರ ಪವಿತ್ರ ಕ್ಷೇತ್ರ - ಮೆಕ್ಕಾದ ಕಾಬಾ

12. ಪ್ರವಾದಿ ಮಹಮ್ಮದರ ಜೀವನಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ

A. ಮಹಮ್ಮದರ ತಂದೆ ಅಬ್ದುಲ್ಲಾ, ತಾಯಿ ಅಮೀನಾ ಅವರು ಹುಟ್ಟುವುದಕ್ಕೆ ಮುನ್ನವೇ ತಂದೆಯನ್ನು ಕಳೆದುಕೊಂಡಿದ್ದರು. ☑

B. ಪ್ರಾರಂಭದಲ್ಲಿ ಅವರು ಚಿಕ್ಕಪ್ಪನಿಗೆ ವ್ಯಾಪಾರದಲ್ಲಿ ನೆರವಾಗತೊಡಗಿದರು.ಮುಂದೆ ಖದೀಜಾ ಎಂಬ ಧನಿಕ ವಿಧವೆಯೊಬ್ಬಳು ಇವರನ್ನು ತನ್ನ ವ್ಯಾಪಾರದ ಪ್ರತಿನಿಧಿಯಾಗಿ ನೇಮಿಸಿಕೊಂಡಳು. ☑

C. ಮುಂದೆ ಮಹಮ್ಮದರ ಸರಳತೆ ಮತ್ತು ಪ್ರಾಮಾಣಿಕತೆಯನ್ನು ಮೆಚ್ಚಿಕೊಂಡು ಅವರನ್ನು ಮದುವೆಯಾದಳು. ☑



Scanned with OKEN Scanner

Navachethana education YouTube & telegram channel Copy Rights Reserved

D. ತಮ್ಮ 40ನೆಯ ವಯಸ್ಸಿನಿಂದ ಮಹಮ್ಮದರು ಪ್ರಾರ್ಥನೆ ಮತ್ತು ಧ್ಯಾನಗಳಲ್ಲಿ ಮಗ್ನವಾಗಿರುತ್ತಿದ್ದರು. ☑

ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿವೆ

13. ಇಸ್ಲಾಮಿನ ಮೂಲ ಗ್ರಂಥ ಯಾವುದು - ಕುರಾನ್ ಇದು ಅರೇಬಿಕ್ ಭಾಷೆಯಲ್ಲಿದೆ

14. A.'ಇಸ್ಲಾಂ' ಪದದ ಅರ್ಥ '- ಶರಣಾಗತಿ

B. ಮುಸ್ಲಿಮ್' ಎಂದರೆ "ಅಲ್ಲಾನಿಗೆ ಶರಣಾದವರು'

15. ಪ್ರವಾದಿಯವರು ಮೆಕ್ಕದಿಂದ ಮದೀನಕ್ಕೆ ಹೋದ ವರ್ಷದಿಂದಲೇ - -ಮುಸಲ್ಮಾನರ 'ಹಿಜಿರಾ' ಶಕೆ ಆರಂಭವಾದದ್ದು

16. ಈ ಕೆಳಕಂಡವುಗಳಲ್ಲಿ ಯಾವುದು ಸರಿಯಾಗಿದೆ ?

ಎ) ಪ್ರಾರ್ಥನೆ – ನಮಾಜ್ ☑

ಬಿ) ದಾನ – ಜಕಾತ್ ☑

ಸಿ) ಹಜ್ – ಮೆಕ್ಕಾಯಾತ್ರೆ ☑

17. ಮಹಮ್ಮದರ ಉತ್ತರಾಧಿಕಾರಿಗಳನ್ನು ಖಲೀಫ ಎನ್ನುವರು

18. ಅರಬ್ಬರ ಪ್ರಸಿದ್ಧ ವಿದ್ಯಾ ಕೇಂದ್ರ ಯಾವುದು - ಬಾಗ್ದಾದ್

19. 'ಉಮ್ಮರ್ ಖಯ್ಯಾಮನ ಪ್ರಸಿದ್ಧ ಕೃತಿ ಯಾವುದು - ರುಬಾಯತ್'



Scanned with OKEN Scanner

Navachethana education YouTube & telegram channel Copy Rights Reserved

20. ಫಿರ್ದೂಸಿಯ ಪ್ರಸಿದ್ಧ ಕೃತಿ ಯಾವುದು - ಷಾನಾಮ

21.ಅರಬ್ಬರ ಪ್ರಸಿದ್ಧ ವೈದ್ಯಕೀಯ ಪದ್ಧತಿ ಯಾವುದು - ಯುನಾನಿ

22. ಕ್ರೈಸ್ತರು ಮತ್ತು ಮುಸಲ್ಮಾನರಿಗೆ ಪ್ಯಾಲೆಸ್ಟೈನ್ ಹಾಗೂ ಅದರ ರಾಜಧಾನಿ ಜರೂಸಲಮ್ ಪವಿತ್ರ ಭೂಮಿಯಾಗಿತ್ತು.

23. ಕ್ರೈಸ್ತರು ಮತ್ತು ಮುಸಲ್ಮಾನರು ಒಂಬತ್ತು ಬಾರಿ ಯುದ್ಧಗೈದರು. ಈ ಯುದ್ಧಗಳನ್ನು ಇತಿಹಾಸದಲ್ಲಿ ರಿಲಿಜಸ್ ಯುದ್ಧಗಳು (ಕ್ರೂಸೇಡ್ಸ್ ) ಎನ್ನುತ್ತಾರೆ.

24. ಕ್ರೂಸೇಡ್ ಯುದ್ಧಗಳಿಗೆ ಮುಖ್ಯ ಕಾರಣ ಯಾವುದು - ಟರ್ಕರು ಜೆರೂಸಲಮ್ ಯಾತ್ರಿಗಳ ಮೇಲೆ ನಿಷೇಧ ಹೇರಿದ್ದು ಈ ಯುದ್ಧಗಳಿಗೆ ಮೂಲ ಕಾರಣವಾಗಿತ್ತು.

## ಮಂಗೋಲರು

- ಮಂಗೋಲಿಯ - ಮಧ್ಯ ಏಷ್ಯದ ಸಮೃದ್ಧ ಹುಲ್ಲುಮೈದಾನಗಳ ನಾಡು.
- ಅಲೆಮಾರಿ ಜನರೇ ಮಂಗೋಲರು
- ಅವರ ಮುಖ್ಯ ವೃತ್ತಿ - ಪಶುಪಾಲನೆ
- ಕುಬ್ಲಾಯ್ ಖಾನ್ - ಚಂಗಿಸ್ ಖಾನನ ಮೊಮ್ಮಗ



Scanned with OKEN Scanner

Navachethana education YouTube & telegram channel Copy Rights Reserved

**1.ಕುಬ್ಲಾಯ್ ಖಾನ್ ಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**

A. ಕುಬ್ಲಾಯ್ ಖಾನ್ ಚಂಗಿಸ್ ಖಾನನ ಮೊಮ್ಮಗ, ಚೀನಾ ದೇಶದ ಚಕ್ರವರ್ತಿಯಾಗಿ ಕುಬ್ಲಾಯ್ ಖಾನ್ ಮರೆದನು.☑

B. ಉತ್ತಮ ಆಡಳಿತಗಾರ; ದಯಾಳು ಸಾಮ್ರಾಟ. ಇವನು ಅನೇಕ ಜನಪರ ಕಾಮಗಾರಿಗಳನ್ನು ಕೈಗೊಂಡನು. ಕ್ಷಾಮಗಳು ತಲೆದೋರಿದಾಗ ಹಸಿದವರಿಗೆ ಅನ್ನದಾನ ಮಾಡಿದನು.☑

C. ಕಲೆ ಮತ್ತು ವಿದ್ವಾಂಸರಿಗೆ ಪ್ರೋತ್ಸಾಹ ನೀಡಿದನು.ಚೀನಾ ದೇಶದ ಧರ್ಮ-ಸಂಸ್ಕೃತಿಗಳು ಕುಬ್ಲಾಯ್ ಖಾನನ ಮೇಲೆ ಪ್ರಭಾವ ಬೀರಿದವು.☑

D. ಈತನು ಬೌದ್ಧಮತಕ್ಕೆ ಪರಿವರ್ತನೆಗೊಂಡನು.☑

**ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿವೆ**

**2. ಕಾಲಗತಿಯಲ್ಲಿ ಅವನತಿ ಕಂಡ ಕುಬ್ಲಾಯ್ ಖಾನನ ಸಾಮ್ರಾಜ್ಯವನ್ನು ಮತ್ತೊಮ್ಮೆ ಕಟ್ಟಿದ್ದು ಯಾರು - ತೈಮೂರ್**

**3. ತೈಮೂರ್ ನಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**

A. ಕಾಲಗತಿಯಲ್ಲಿ ಅವನತಿ ಕಂಡ ಕುಬ್ಲಾಯ್ ಖಾನನ ಸಾಮ್ರಾಜ್ಯವನ್ನು ತೈಮೂರ್' ಮತ್ತೊಮ್ಮೆ ಕಟ್ಟಿದನು.☑

B. ತೈಮೂರ್ ಅತಿ ಕ್ರೂರಿ, ಪರ್ಷಿಯ, ಇರಾಕ್, ಸಿರಿಯ, ಅಫ್‌ಘಾನಿಸ್ತಾನ ಹಾಗೂ ರಷ್ಯದ ಅನೇಕ ಭಾಗಗಳನ್ನು ಆಕ್ರಮಣ ಮಾಡಿ, ವಿಶಾಲ ಸಾಮ್ರಾಜ್ಯವನ್ನು ಕಟ್ಟಿದ.☑

C. ಭಾರತವನ್ನು ಆಕ್ರಮಣ ಮಾಡಿ ಮೊಗಲ್ (ಮಂಗೋಲ್) ರಾಜ್ಯವನ್ನು ಸ್ಥಾಪಿಸಿದ ಬಾಬರ್ ಇದೇ ಸಂತತಿಯವನು☑

**ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿವೆ**



Scanned with OKEN Scanner

Navachethana education YouTube & telegram channel Copy Rights Reserved

**4. ಆಟೋಮನ್ ಟರ್ಕರಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**

A. ಅಲೆಮಾರಿ ಜನಾಂಗಕ್ಕೆ ಸೇರಿದ ಟರ್ಕರ ಮೂಲಸ್ಥಾನ ಮಧ್ಯ ಏಷ್ಯದ ತುರ್ಕಿಸ್ತಾನ ಇವರು ಇಸ್ಲಾಂ ಅನುಯಾಯಿಗಳಾದರು. ☑

B. ಕುಬ್ಲಾಯ್ ಖಾನನ ಸಾಮ್ರಾಜ್ಯ ಅವನತಿ ಕಂಡ ಬಳಿಕ, ಟರ್ಕರು ಸುತ್ತಮುತ್ತಲಿನ ವಿಶಾಲವಾದ ಪ್ರದೇಶಗಳನ್ನು ಆಕ್ರಮಿಸಿಕೊಂಡರು. ☑

C. 'ಅಟೋಮನ್' ಎಂಬ ಮಿಲಿಟರಿ ರಾಜ್ಯವನ್ನು ಕಟ್ಟಿದರು. ☑

D. ಭಾರತದ ಮೇಲೆ ಆಕ್ರಮಣ ನಡೆಸಿ, ಸಂಪತ್ತನ್ನು ಲೂಟಿ ಮಾಡಿ, ಸಾಕಷ್ಟು ಸಾವು ನೋವುಗಳಿಗೆ ಕಾರಣರಾದರು. ☑

**ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿವೆ**

**5. ಕ್ರಿಸ್ತಪೂರ್ವ (ಬಿ.ಸಿ.) 220 ಎಂದರೆ 'ನಮ್ಮ ಪ್ರಭುವಿನ ವರ್ಷ'ಕ್ಕೆ ಮುನ್ನ 220 ವರ್ಷಗಳ ಹಿಂದೆ ಎಂದು ಅರ್ಥ.**

**ಕಾಲಗಣನೆ (ಕ್ರಿ.ಶ.)**

**1.ಮತೀಯ ಯುದ್ಧಗಳು - 12-13ನೇ ಶತಮಾನ**

**2.ಮಕ್ಕಳ ಕ್ರೂಸೇಡ್ - 1212**

**3.ಪ್ರವಾದಿ ಮಹಮ್ಮದ್ - ಸುಮಾರು 569-632**

**4.ಹಿಜರಿ ಶಕ - 622 ರಿಂದ ಪ್ರಾರಂಭ**

**5.ಚಂಗಿಸ್ ಖಾನ್ - 1162 - 1227**

**6.ಕುಬ್ಲಾಯ್ ಖಾನ್ - 1215 - 1294**

**7.ತೈಮೂರ್ - 1369 - 1405**



Scanned with OKEN Scanner

Navachethana education YouTube & telegram channel Copy Rights Reserved

'ಬೆತ್ಲೆಹೆಂ - ಜೆರೂಸಲೇಂನ ಸಮೀಪದ ಒಂದು ಚಿಕ್ಕ ಪಟ್ಟಣ.

ಇದು ಇಂದಿನ ಇಸ್ರೇಲ್‌ನ ಜೋಡಿಯ ಎಂಬ ಪ್ರದೇಶದಲ್ಲದೆ,

- ಯೇಸು ಯೆಹೂದಿ (ಹೀಬ್ರೂ) ಸಂತತಿಯವ

## 2. ಮಧ್ಯಯುಗದ ಯುರೋಪ್

ಆಧುನಿಕ ಯುಗದ ಪ್ರಾರಂಭ - ಪುನರುಜ್ಜೀವನ

1.ಪುನರುಜ್ಜೀವನ ಎಂದರೆ `ಮರುಹುಟ್ಟು' ( ರಿನೈಸಾನ್ಸ್ Renaissance). ಇದಕ್ಕೆ ಪುನರುಜ್ಜೀವನ ಎಂಬ ಅರ್ಥವೂ ಇದೆ.

2. ಪುನರುಜ್ಜೀವನ ಎಲ್ಲಿ ಆರಂಭವಾಯಿತು - ಇಟಲಿ

3. ಪುನರುಜ್ಜೀವನ ಲಕ್ಷಣಗಳು ಯಾವುವು - ಮಾನವತಾವಾದ & ವೈಚಾರಿಕತೆ

4.ಪ್ರಾಚೀನ ಗ್ರೀಕ್ ಸಾಹಿತ್ಯವನ್ನು ಅಧ್ಯಯನ ನಡೆಸುತ್ತಿದ್ದ ವಿದ್ವಾಂಸರನ್ನು 'ಮಾನವಾಸಕ್ತರು' (humanists) ಎಂದು ಕರೆಯಲಾಗುತ್ತಿತ್ತು.

5.ಇದು ಪುನರುಜ್ಜೀವನದ ಕಲಾತ್ಮಕ ವಾಸ್ತುಶಿಲ್ಪಗಳಾಗಿದೆ - ಇಗರ್ಜಿಗಳು



Scanned with OKEN Scanner

Navachethana education YouTube & telegram channel Copy Rights Reserved

6.ಇಸ್ತಾನ್‌ಬುಲ್, ಈಗಿನ ಟರ್ಕಿ ದೇಶದ ಬಂದರು ನಗರ,

- ಇದನ್ನು ಹಿಂದೆ ಕಾನ್‌ಸ್ಟಂಟನೋಪಲ್ ಅದಕ್ಕೂ ಮೊದಲು ಇದನ್ನು ಬೈಜಾಂಟಿಯನ್ ಎನ್ನುತ್ತಿದ್ದರು.

7. ಟರ್ಕರ ಸುಲ್ತಾನ ಮೊಹಮ್ಮದನು ಪೂರ್ವ ರೋಮನ್ ಸಾಮ್ರಾಜ್ಯದ ರಾಜಧಾನಿಯಾಗಿದ್ದ ಕಾನ್‌ಸ್ಟಂಟಿನೋಪಲ್ ನಗರದ ಮೇಲೆ ಆಕ್ರಮಣ ಮಾಡಿದ ವರ್ಷ - **1453**

8. ಕಾನ್ ಸ್ಟಾಂಟಿನೋಪಲ್ ಪಟ್ಟಣವನ್ನು ಯಾರು, ಯಾವ ವರ್ಷದಲ್ಲಿ ವಶಪಡಿಸಿಕೊಂಡರು?

- ಆಟೋಮನ್ ಟರ್ಕರು 1453 ರಲ್ಲಿ ವಶಪಡಿಸಿಕೊಂಡರು.

9.ಮುದ್ರಣಯಂತ್ರವನ್ನು ಕಂಡು ಹಿಡಿದವರು ಯಾರು- ಜಾನ್‌ಗುಟೆನ್ ಬರ್ಗ್

10. ಸಾ. ಶ 1477 ರಲ್ಲಿ ಯಾರು ಇಂಗ್ಲೆಂಡಿನಲ್ಲಿ ಸುಧಾರಿತ ಮುದ್ರಣಯಂತ್ರವನ್ನು ಸ್ಥಾಪಿಸಿದನು. - ವಿಲಿಯಂ ಕ್ಯಾಕ್ಸ್‌ಟನ್

11. ಪುನರುಜ್ಜೀವನದ ಪಿತಾಮಹ ಹಾಗೂ "ಮಾನವತಾವಾದದ ಪಿತಾಮಹ" ಎಂದು ಯಾರನ್ನು ಕರೆಯಲಾಗಿದೆ

- ಪೆಟ್ರಾರ್ಕ್

💢 ಪುನರುಜ್ಜೀವನ ಕಾಲದ ಪ್ರಮುಖ ಬರಹಗಾರರು ಮತ್ತು ಕೃತಿಗಳು

- ಪೆಟ್ರಾರ್ಕ್: - ಪೆಟ್ರಾರ್ಕ್‌ನು 200 ಲ್ಯಾಟಿನ್ ಮತ್ತು ಗ್ರೀಕ್, ಹಸ್ತ ಪ್ರತಿಗಳನ್ನು ಸಂಗ್ರಹಿಸಿದನು. ಇವನನ್ನು " ಪುನರುಜ್ಜೀವನ ಪಿತಾಮಹಾ" ಎಂದು ಕರೆಯಲಾಗಿದೆ. ಇವನ ಕೃತಿಗಳು "ಡೌಲೆ " ಮತ್ತು "ಆಫ್ರಿಕಾ,



Scanned with OKEN Scanner

Navachethana education YouTube & telegram channel Copy Rights Reserved

- ಡಾಂಟೆ – "ಡಿವೈನ್ ಕಾಮಿಡಿ", "ದಿ ಮೊನಾರ್ಕಿ"

- ಬೊಕಾಷಿಯೋ - "ಡೆಕಾಮೆರಾನ್"

- ಸರ್ವಾಂಟಿಸ್ - 'ಡಾನ್ ಕ್ವಿಕ್ಸಾಟ್' ಎಂಬ ಪ್ರಸಿದ್ಧ ಸಾಹಿತ್ಯ ಕೃತಿಯಲ್ಲಿ ಮಧ್ಯ ಯುಗದ ಸರದಾರರನ್ನು (knights) ಗೇಲಿ ಮಾಡಿದನು.

- ವಿಲಿಯಮ್ ಷೇಕ್ಸ್‌ಪಿಯರ್ - 'ಜೂಲಿಯಸ್ ಸೀಜರ್', 'ರೋಮಿಯೋ ಜ್ಯೂಲಿಯಟ್', 'ಕಿಂಗ್ ಲಿಯರ್', 'ಮ್ಯಾಕ್‌ಬೆತ್'

12. ಸಂತ ಪೀಟರ ಚರ್ಚ್ ಇರುವ ಸ್ಥಳ - ರೋಮ್

13. 'ಡೇವಿಡ್ ಪ್ರತಿಮೆ' ನಿರ್ಮಿಸಿದ ಮಹಾನ್ ಶಿಲ್ಪಿ - ಡೊನಾಟೆಲ್ಲೊ

14. 'ಮೋಸೆಸ್ ಪ್ರತಿಮೆ' ನಿರ್ಮಿಸಿದ ಶಿಲ್ಪಿ - ಮೈಕೆಲೆಂಜೆಲೊ

15. ಲಿಯೊನಾರ್ಡೊ ದ ವಿಂಚಿ ಆತನ ಪ್ರಸಿದ್ಧ ವರ್ಣ ಚಿತ್ರಗಳು
 - 'ವರ್ಜಿನ್ ಆನ್ ದಿ ರಾಕ್ಸ್', 'ದಿ ಲಾಸ್ಟ್ ಸಪ್ಪರ್' ಮತ್ತು 'ಮೊನಾಲಿಸಾ'

16. ಮೈಕಲ್ ಏಂಜೆಲೋ – "ಲಾಸ್ಟ್ ಜಡ್ಜ್ಮೆಂಟ್", ದಿ ಕ್ರಿಯೇಷನ್ ಆಫ್ ಆಡಂ", "ಡೇ ಅಂಡ್ ನೈಟ್", "ಡಾನ್ ಅಂಡ್ ಸನ್ ಸೆಟ್ "



Scanned with OKEN Scanner

Navachethana education YouTube & telegram channel Copy Rights Reserved

## ಪುನರುಜ್ಜೀವನ ಕಾಲದ ವೈಜ್ಞಾನಿಕ ಸಂಶೋಧನೆ

- ಜಾಕೂಟ್ ಸೂಫರ್ - ಇವನು ಮೊದಲ ಯಶಸ್ವಿ ಶಸ್ತ್ರ ಚಿಕಿತ್ಸೆ ಮಾಡಿದನು.
- ರೋಜರ್ ಬೇಕನ್ – ಸಿಡಿಮದ್ದಿನ ವಿವಿಧ ಉಪಯೋಗ ಮತ್ತು ಭೂತಕನ್ನಡಿ ಸಂಶೋಧನೆ
- ಲಿಯೊನಾರ್ಡೊ ದ ವಿಂಚಿ - ಹಾರುವಯಂತ್ರ ಸಬ್‌ಮೆರಿನ್, ಪ್ಯಾರಾಚೂಟ್ ಮತ್ತು ಟ್ಯಾಂಕರ್
- ಕೋಪರ್ನಿಕಸ್ - ಗ್ರಹಗಳ ಸೂರ್ಯಕೇಂದ್ರ ಸಿದ್ಧಾಂತ
- ಗೆಲಿಲಿಯೊ - ದೂರದರ್ಶಕ ಯಂತ್ರವನ್ನು ಕಂಡುಹಿಡಿದನು
- ಐಸಾಕ್ ನ್ಯೂಟನ್ - ಗುರುತ್ವಾಕರ್ಷಣ ನಿಯಮ ಪ್ರತಿವಾದಿಸಿದ
- ವಿಲಿಯಂ ಹಾರ್ವೆ - ಮಾನವನ ದೇಹದಲ್ಲಿನ ರಕ್ತ ಪರಿಚಲನೆಯ ಕ್ರಮವನ್ನು ತೋರಿಸಿಕೊಟ್ಟನು
- ವೆಸಾಲಿಯಸ್ ಎಂಬ ಬೆಲ್ಜಿಯಮ್ ವಿಜ್ಞಾನಿಯು
  - ದೇಹದಲ್ಲಿ ರಕ್ತಸಂಚಾರದ ಬಗ್ಗೆ ಅಮೂಲ್ಯ ಗ್ರಂಥವನ್ನು ಪ್ರಕಟಿಸಿದನು.



Scanned with OKEN Scanner

Navachethana education YouTube & telegram channel Copy Rights Reserved

## ಧಾರ್ಮಿಕ ಸುಧಾರಣೆ

1.ಧಾರ್ಮಿಕ ಸುಧಾರಣೆಯ "ಉಷಾತಾರೆ" ಎಂದು ಯಾರನ್ನು ಕರೆಯಲಾಗಿದೆ

- ಜಾನ್ ವೈಕ್ಲಿಫ್

2.ರೋಮ್ ನ್ ಚರ್ಚಿನ ಅನೈತಿಕ ನಡವಳಕೆಗಳನ್ನು ಕಟುವಾಗಿ ಟೀಕಿಸಿದವನು

- ಜಾನ್ ಹಸ್

3. ಕ್ಯಾಥೋಲಿಕ್ ಧರ್ಮದಲ್ಲಿ ಬಿರುಕು ಉಂಟಾಗಲು ಪ್ರಮುಖ ಕಾರಣವೆಂದರೆ

- ಪಾಪಕ್ಷಮಾಪಣ ಪತ್ರಗಳ ಮಾರಾಟ

4. ಪಾಪಕ್ಷಮಾಪಣೆ ಪತ್ರಗಳನ್ನು ಖರೀದಿಸಿದವರು ಪಾಪವಿಮುಕ್ತಗೊಂಡು ಸ್ವರ್ಗಕ್ಕೆ ಹೋಗುತ್ತಾರೆ ಎಂದು ಹೇಳಿದ ಪೋಪ್ ಗುರು ಯಾರು - 10ನೇ ಲಿಯೋ

5. ಧಾರ್ಮಿಕ ಸುಧಾರಣೆಯ ನಾಯಕ ಯಾರು -

ಮಾರ್ಟಿನ್ ಲೂಥರ್

6.ಪ್ರತಿಸುಧಾರಣಾ ಚಳವಳಿಯ ನಾಯಕ - ಇಗ್ನೇಶಿಯಸ್ ಲಯೋಲಾ

7. ಇಗ್ನೇಶಿಯಸ್ ಲಯೋಲಾ ಸ್ಥಾಪಿಸಿದ ಸಂಘ - ಜೀಸಸ್ ಸಂಘ (1541)

8. ಜೀಸಸ್ ಸಂಘದ ಸದಸ್ಯರನ್ನು ಜೆಸ್ಯುಯಿಟರು ಎಂದು ಕರೆದರು.



Scanned with OKEN Scanner

Navachethana education YouTube & telegram channel Copy Rights Reserved

## ಭೌಗೋಳಿಕ ಅನ್ವೇಷಣೆಗಳು

**1. ಭೌಗೋಳಿಕ ಅನ್ವೇಷಣೆಗೆ ಕಾರಣವಾದ ಅಂಶಗಳನ್ನು ಗುರುತಿಸಿರಿ**

A. ಸಾ.ಶ.1453ರಲ್ಲಿ ಟರ್ಕರು ಕಾನ್‌ಸ್ಟಂಟಿನೋಪಲ್ ನಗರವನ್ನು ವಶಪಡಿಸಿಕೊಂಡರು. ☑

B. ಮಾರ್ಕ್ ಪೋಲೊವಿನ ವರದಿ ಏಷ್ಯದ ದೇಶಗಳಿಗೆ (ಭಾರತ, ಚೀನ) ಭೇಟಿ ನೀಡಿದ ಮಾರ್ಕ್ ಪೋಲೊ ತನ್ನ ವರದಿಯಲ್ಲಿ ಏಷ್ಯದ ದೇಶಗಳು ಅಪಾರ ಸಂಪತ್ತಿನಿಂದ ಕೂಡಿವೆಯೆಂಬುದಾಗಿ ವಿವರಿಸಿದ್ದನು. ☑

C. ಏಷ್ಯದ ದೇಶಗಳ ಸರಕುಗಳು ಮತ್ತು ಸಂಬಾರ ಪದಾರ್ಥಗಳಿಗೆ ಯುರೋಪಿನಲ್ಲಿ ಭಾರಿ ಬೇಡಿಕೆಯಿತ್ತು. ☑

D. ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ, ನಕ್ಷತ್ರೋನ್ನತಿ ಮಾಪಕ (ಅಕ್ಸ್ಟ್ರೋಲ್ಯಾಬ್), ನಕ್ಷೆಗಳು ಮತ್ತು ಕ್ಯಾಲೆವೆಲ್ ಎಂಬ ಬೃಹತ್ ಹಾಯಿಹಡಗುಗಳು ಸಮುದಾನದಲ್ಲಿ ತೊಡಗಿದ ನಾವಿಕರಿಗೆ ವರವಾಗಿ ಪರಿಣಮಿಸಿದವು. ☑

ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿದೆ

**2. 'ಹೆನ್ರಿ ದ ನ್ಯಾವಿಗೇಟರ್' ಎಂದು ಯಾರನ್ನು ಕರೆಯಲಾಗುತ್ತಿತ್ತು**

- ಪೋರ್ಚುಗೀಸ್ ರಾಜಕುಮಾರ ಹೆನ್ರಿ

**3. 'ಸ್ಕೂಲ್ ಆಫ್ ನಾವಿಗೇಶನ್' ಎಂಬ ಶಾಲೆಯ ಸ್ಥಾಪಕ - ಹೆನ್ರಿ**



Scanned with OKEN Scanner

Navachethana education YouTube & telegram channel Copy Rights Reserved

4. ಆಫ್ರಿಕದ ದಕ್ಷಿಣದ ತುದಿಯನ್ನು 'ಬಿರುಗಾಳಿಯ ಭೂಶಿರ 'ಎಂದು ಕರೆದವರು ಯಾರು

- ಬಾರ್ತಲೋಮಿಯೊ ಡಾಯಸ್

5. ಆಫ್ರಿಕದ ದಕ್ಷಿಣ ತುದಿಯನ್ನು 'ಬಿರುಗಾಳಿಯ ಭೂಶಿರವಲ್ಲ ಅದು 'ಭರವಸೆಯ ಭೂಶಿರ' (ಕೇಫ್ ಆಫ್ ಗುಡ್ ಹೋಪ್) ಎಂದು ಕರೆದವನು - 2ನೇ ಜಾನ್

6. ಮೆ17, 1498 ರಂದು ಭಾರತದ ಪಶ್ಚಿಮ ಕರಾವಳಿಯಲ್ಲಿ "ಕಲ್ಲಿಕೋಟೆ "ಯನ್ನು ತಪ್ಪಿದನು

7.ಭಾರತಕ್ಕೆ ಹೊಸ ಜನ ಮಾರ್ಗವನ್ನು ಕಂಡುಹಿಡಿದ ಕೀರ್ತಿ ವಾಸ್ಕೋಡಿಗಾಮನಿಗೆ ಸಲ್ಲುತ್ತದೆ

8. 'ಭೂಮಿ ದುಂಡಾಗಿದೆ' ಎಂಬ ದೃಢ ನಂಬಿಕೆಯೊಂದಿಗೆ ಪಶ್ಚಿಮ ಮಾರ್ಗವಾಗಿ ಸಮುದ್ರಯಾನ ಕೈಗೊಂಡ ಸ್ಪೇನ್ ದೇಶದ ನಾವಿಕ - ಕ್ರಿಸ್ಟೋಫರ್ ಕೊಲಂಬಸ್

9.ಕೋಲಂಬಸನ ಅಮೆರಿಕದ ಮೂಲನಿವಾಸಿಗಳನ್ನು ಏನೆಂದು ಕರೆದನು

- ರೆಡ್ ಇಂಡಿಯನ್ಸ್

10. ದಕ್ಷಿಣ ಅಮೇರಿಕಾವನ್ನು ಅಂದರೆ "ಬ್ರೇಜಿಲ್"ನ್ನು ಶೋಧಿಸಿದವರು - ಕೆಬ್ರಾಲ್

11.ಕೊಲಂಬಸ್ ಕಂಡುಹಿಡಿದ ಹೊಸ ನಾಡನ್ನು “ಅಮೇರಿಕಾ'' ಎಂದು ಕರೆದನು.

- ಅಮೇರಿಗೊ ವೆಸಪುಸಿ



Scanned with OKEN Scanner

Navachethana education YouTube & telegram channel Copy Rights Reserved

**12.ಪ್ರಪ್ರಥಮವಾಗಿ ಭೂ ಪರ್ಯಟನಾ ನೌಕಾಯಾನ ಕೈಗೊಂಡ ಪೋರ್ಚುಗೀಸ್ ಸಾಹಸೀ ನಾವಿಕ - ಫರ್ಡಿನಾಂಡ್ ಮೆಗಲ್ಲನ್**

**13. ಫರ್ಡಿನಾಂಡ್ ಮೆಗಲ್ಲನ್ ಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**

**A.**ಫರ್ಡಿನಾಂಡ್ ಮೆಗಲನ್' 'ಪ್ರಪಂಚವು ದುಂಡಾಗಿದೆ' ಎಂದು ಭಾವಿಸಿದ್ದನು. ಇವನು ಪಶ್ಚಿಮಾಭಿಮುಖವಾಗಿ ಹೊರಟು ಪೂರ್ವ ದೇಶಗಳಿಗೆ ಮಾರ್ಗ ಕಂಡುಹಿಡಿಯಲು ಬಯಸಿದ.☑

**B.** ಮೆಗಲ್ಲನ್ ದಾಟಿಹೋದ ಜಲಸಂಧಿಯನ್ನು 'ಮೆಗಲ್ಲನ್ ಜಲಸಂಧಿ'ಯೆಂದೂ ಸಾಗರವನ್ನು ಪೆಸಿಫಿಕ್ (ಶಾಂತ) ಮಹಾಸಾಗರ ಎಂದೂ ಮುಂದೆ ಕರೆಯಲಾಯಿತು.☑

**C.**ಮೆಗಲ್ಲನ್ ಮತ್ತು ಅವನ ಸಂಗಡಿಗರಲ್ಲಿ ಕೆಲವರು ಫಿಲಿಪೈನ್ಸ್‌ನಲ್ಲಿ ಸ್ಥಳೀಯರೊಂದಿಗೆ ನಡೆದ ಹೋರಾಟದಲ್ಲಿ ಸಾವನ್ನಪ್ಪಿದರು☑.

**D.**ಉಳಿದವರು 'ವಿಕ್ಟೋರಿಯಾ' ಎಂಬ ಹಡಗಿನಲ್ಲಿ 1522ರಲ್ಲಿ ಸ್ಪೇನ್ ತಲುಪಿದರು. ಭೂಪ್ರದಕ್ಷಿಣೆ ಮಾಡಿದ ಮೊದಲ ಹಡಗು 'ವಿಕ್ಟೋರಿಯಾ' ಎನ್ನಬಹುದು ☑

ಮೇಲಿನ ಎಲ್ಲ ಹೇಳಿಕೆಗಳು ಸರಿಯಾಗಿವೆ

NAVACHETANA EDUCATIONS
7019752139



Scanned with OKEN Scanner

# ಅಧ್ಯಾಯ -3

## ಭಾರತಕ್ಕೆ ಐರೋಪ್ಯರ ಆಗಮನ

1. ಭಾರತಕ್ಕೆ ಬಂದ ಮೊಟ್ಟ ಮೊದಲ ಯೂರೋಪಿಯನ್ನರು ಹಾಗೂ ಭಾರತ ತೊರೆದ ಕಟ್ಟ ಕಡೆಯ ಯೂರೋಪಿಯನ್ನರಾಗಿದ್ದಾರೆ - **ಪೋರ್ಚುಗೀಸರು**

2.ಪೋರ್ಚುಗೀಸ್ ನಾವಿಕ ವಾಸ್ಕೋಡಿಗಾಮನಿಗೆ ವ್ಯಾಪಾರಕ್ಕೆ ಅನುಮತಿ ನೀಡಿದ ಕಲ್ಲಿಕೋಟೆ ದೊರೆ - **ಜಾಮೊರಿನ್**

3.ಭಾರತದಲ್ಲಿ ಪೋರ್ಚುಗೀಸರ ಪ್ರಾಬಲ್ಯ ಸ್ಥಾಪನೆ ಮಾಡುವುದು ಇವನ ಗುರಿಯಾಗಿತ್ತು **- ಅಲ್ಬುಕರ್ಕ್**

4. ಆಲ್ಮೇಡನ ನಂತರ ಪೋರ್ಚುಗೀಸರ ವೈಸ್‌ರಾಯ್ ಆಗಿ ಬಂದವನು ಯಾರು - **ಅಲ್ಬುಕರ್ಕ್**

5. ಆಲ್ಮೇಡನ ನಂತರ ಪೋರ್ಚುಗೀಸರ ವೈಸ್‌ರಾಯ್ ಆಗಿ ಅಲ್ಬುಕರ್ಕ್ ಭಾರತಕ್ಕೆ ಬಂದ ವರ್ಷ ಯಾವುದು - **1509**

6.ಅಲ್ಬುಕರ್ಕ್ ಸಂಪದ್ಭರಿತ ಗೋವಾ ಬಂದರನ್ನು ಯಾರಿಂದ ಸ್ವಾಧೀನ ಪಡಿಸಿಕೊಂಡನು **- ವಿಜಯಪುರ ಸುಲ್ತಾನ**

7. ಅಲ್ಬುಕರ್ಕ್ ನಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ



Scanned with OKEN Scanner

A. ಪೋರ್ಚುಗೀಸರು ಅಲ್ಬುಕರ್ಕ್ ಎಂಬವನನ್ನು ಭಾರತಕ್ಕೆ ಗವರ್ನರ್ ಆಗಿ ಕಳುಹಿಸಿದರು (1509) ☑

B. ಭಾರತದಲ್ಲಿ ಪೋರ್ಚುಗೀಸರ ಪ್ರಾಬಲ್ಯ ಸ್ಥಾಪನೆ ಮಾಡುವುದು ಇವನ ಗುರಿಯಾಗಿತ್ತು. ಈತನು ಸಂಪತ್ಭರಿತ ಗೋವಾ ಬಂದರನ್ನು ವಿಜಯಪುರ ಸುಲ್ತಾನನಿಂದ ಸ್ವಾಧೀನ ಪಡಿಸಿಕೊಂಡನು. ☑

C. ಅಲ್ಬುಕರ್ಕನ ಬಳಿಕ ಬಂದ ಗವರ್ನರ್ ಗಳು ದಿಯು, ದಮನ್, ಸಾಲ್ಸಿಟ್,ಬೆಸ್ಸಿನ್ , ಚೌಲ್, ಮುಂಬೈ, ಸಾನ್‌ಥೋಮ್ ಮತ್ತು ಬಂಗಾಳದ ಹೂಗ್ಲಿ ಮುಂತಾದ ಕಡೆ ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ☑

ಈ ಮೇಲಿನ ಎಲ್ಲ ಆಯ್ಕೆ ಸರಿಯಾಗಿದೆ.

**8.ಭಾರತದಲ್ಲಿದ್ದ ಪೋರ್ಚುಗೀಸರ ವ್ಯಾಪಾರಿ ಕೇಂದ್ರಗಳನ್ನು ಹೆಸರಿಸಿರಿ.**

- ದಿಯು, ದಮನ್, ಸಾಲ್ಸಿಟ್,ಬೆಸ್ಸಿನ್ , ಚೌಲ್, ಮುಂಬೈ, ಸಾನ್‌ಥೋಮ್ ಮತ್ತು ಬಂಗಾಳದ ಹೂಗ್ಲಿ

**9.ಯಾವ ವರ್ಷ ಭಾರತೀಯ ಸೇನಾಪಡೆಯು ಪೋರ್ಚುಗೀಸರನ್ನು ಸೋಲಿಸುವುದರೊಂದಿಗೆ ಗೋವಾ ವಿಮೋಚನೆಗೊಂಡಿತು** - **1961**

**10. ಡಚ್ಚರು ಭಾರತದ ಯಾವ ಯಾವ ಪ್ರದೇಶಗಳಲ್ಲಿ ತಮ್ಮ ವ್ಯಾಪಾರ ಕೇಂದ್ರಗಳನ್ನು ತೆರೆದಿದ್ದರು** - ಆಗ್ರಾ, ಮಚಲೀಪಟ್ಟಣ, ಸೂರತ್, ಕಾರೈಕಲ್, ನಾಗಪಟ್ಟಣಂ, ಕೊಚ್ಚಿ

**11. ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾದ ವರ್ಷ** - **1600**



Scanned with OKEN Scanner

12. ಬ್ರಿಟೀಷ್ ಈಸ್ಟ್ ಇಂಡಿಯಾ ಕಂಪನಿಗೆ ವ್ಯಾಪಾರದ ಸನ್ನದು ನೀಡಿದವರು

- ಬ್ರಿಟನ್ ರಾಣಿ ಎಲಿಜಬೆತ್

13. ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ

A. ಇಂಗ್ಲೆಂಡಿನ ವರ್ತಕರು ಪೂರ್ವ ದೇಶಗಳೊಡನೆ ವ್ಯಾಪಾರ ಸಂಪರ್ಕ ಹೊಂದಲು ಬಯಸಿ "ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪಿಸಿದರು.☑

B. ಎಲಿಜಬೆತ್ ರಾಣಿಯ ಅನುಮತಿ ಪಡೆದು (1600ರಲ್ಲಿ) ಭಾರತದೊಡನೆ ವ್ಯಾಪಾರ ಸಂಪರ್ಕ ಬೆಳೆಸಿದರು.☑

C. ಪ್ರಾರಂಭದಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಹಡಗುಗಳು ಸೂರತ್ ಬಂದರಿನಲ್ಲಿ ತಂಗುತ್ತಿದ್ದವು,☑

D. ಮೊಗಲ್ ಚಕ್ರವರ್ತಿ ಜಹಾಂಗೀರನಿಂದ ಅವರು ಅನುಮತಿ ಪಡೆದು ಸೂರತ್, ಆಗ್ರಾ, ಅಹ್ಮದಾಬಾದ್ ಮತ್ತು ಬ್ರೋಚ್‌ಗಳಲ್ಲಿ ವ್ಯಾಪಾರ ಕೇಂದ್ರಗಳನ್ನು ತೆರೆದರು. ಮುಂದೆ ಮದ್ರಾಸ್, ಕಲ್ಕತ್ತ ಮತ್ತು ಮುಂಬೈಗಳಲ್ಲಿಯೂ ತಮ್ಮ ವ್ಯಾಪಾರದ ಕೋಠಿ (ಮಳಿಗೆ)ಗಳನ್ನು ಸ್ಥಾಪಿಸಿದರು.☑

ಈ ಮೇಲಿನ ಎಲ್ಲ ಆಯ್ಕೆ ಸರಿಯಾಗಿದೆ.

14.ಮೊಗಲ್ ಚಕ್ರವರ್ತಿಯಿಂದ ಯಾವ ಪ್ರಾಂತ್ಯಗಳಲ್ಲಿ ಸುಂಕರಹಿತ ವ್ಯಾಪಾರ ಮಾಡುವ ಪರವಾನಗಿಯಾದ 'ದಸ್ತಕ್'ಗಳನ್ನು ಪಡೆದರು.

- (ಬಂಗಾಳ, ಬಿಹಾರ ಮತ್ತು ಒರಿಸ್ಸಾ ) ಮತ್ತು ಸೂರತ್

15. 'ದಸ್ತಕ್'ಗಳೆಂದರೇನು - ಸುಂಕವಿಲ್ಲದೆ ಮುಕ್ತವ್ಯಾಪಾರ ನಡೆಸಲು ಬ್ರಿಟಿಷ್ ವರ್ತಕರಿಗೆ ನೀಡಲಾದ ವಿಶೇಷ ಪಾಸುಗಳೇ 'ದಸ್ತಕ್'ಗಳು.



Scanned with OKEN Scanner

16. ವ್ಯಾಪಾರಕ್ಕಾಗಿ ಭಾರತಕ್ಕೆ ಬಂದ ಯುರೋಪಿಯನ್ನರಲ್ಲಿ

- ಫ್ರೆಂಚರೇ ಕೊನೆಯವರು

17. ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯದ ವರ್ಷ - **1664**

18. ಭಾರತದಲ್ಲಿದ್ದ ಫ್ರೆಂಚ್ ವ್ಯಾಪಾರಿ ಕೇಂದ್ರಗಳು

- ಸೂರತ್, ಪಾಂಡಿಚೇರಿ, ಮಚಲೀಪಟ್ಟಣ, ಕಲ್ಲಿಕೋಟೆ, ಮಾಹೆ , ಕಾರೈಕಲ್ ಮತ್ತು ಚಂದ್ರನಗರ

## ಅಧ್ಯಾಯ - 4

## ಹದಿನೆಂಟನೆಯ ಶತಮಾನದ ಭಾರತ

**(1707-1757)**

1.ಮೊಗಲರ ಅವನತಿಗೆ ಸಂಬಂಧಿಸಿದಂತೆ ಸರಿಯಾದ ಕಾರಣಗಳನ್ನು ಗುರುತಿಸಿ

A. ಔರಂಗಜೇಬನ ನಂತರ ಬಂದ ರಾಜರು ದುರ್ಬಲರಾಗಿದ್ದು ವಿಲಾಸೀ ಜೀವನ ನಡೆಸುತ್ತಿದ್ದರು.☑

B. ಪರ್ಷಿಯದ ರಾಜ ನಾದಿರ್‌ಷಾ ಮೊಗಲರ ರಾಜ್ಯದ ಮೇಲೆ ಭಾರಿ ದಾಳಿ ಮಾಡಿ ಮೊಗಲರ ಅಳಿದುಳಿದ ಸಂಪತ್ತನ್ನು ಹೊತ್ತುಕೊಂಡು, ತನ್ನ ದೇಶಕ್ಕೆ ತೆರಳಿದನು (1739), ಇದರಲ್ಲಿ ಪ್ರಖ್ಯಾತ ಮಯೂರ ಸಿಂಹಾಸನ ಮತ್ತು ಅತ್ಯಂತ ಬೆಲೆಬಾಳುವ ಕೊಹಿನೂರ್ ವಜ್ರವೂ ಸೇರಿದ್ದವು.☑



Scanned with OKEN Scanner

C. ಆದೇ ರೀತಿ ಅಹ್ಮದ್‌ಷಾ ಅಬ್ದಾಲಿಯ ದಾಳಿಯು ಕೂಡ ಭಾರಿ ಹೊಡೆತಕೊಟ್ಟಿತು. ಈ ಎಲ್ಲಾ ಘಟನೆಗಳಿಂದಾಗಿ ಮೊಗಲ್ ರಾಜ್ಯವು ಮತ್ತೆ ಚೇತರಿಸಿಕೊಳ್ಳಲಿಲ್ಲ. ☑

**ಮೇಲಿನ ಎಲ್ಲ ಆಯ್ಕೆ ಸರಿಯಾಗಿದೆ.**

**2. ಪೇಶ್ವೆಯೆಂದರೆ - ಮರಾಠಾ ರಾಜನ ಪ್ರಧಾನಮಂತ್ರಿ**

**3. ಬಾಲಾಜಿ ವಿಶ್ವನಾಥ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**

A. ಈತನು ಮೊಗಲ ಚಕ್ರವರ್ತಿಯೊಡನೆ ದಿಲ್ಲಿ ಮಾಡಿಕೊಂಡನು. ☑

B. ಇದರ ಪರಿಣಾಮವಾಗಿ ದಖನ್ನಿನ ಆರು ಸುಬಾಗಳಿಂದ ತೆರಿಗೆಗಳನ್ನು ವಸೂಲಿ ಮಾಡುವ ಹಕ್ಕನ್ನು ಪಡೆದನು. ☑

**A & B ಎರಡೂ ಸರಿ**

**4. ಒಂದನೆಯ ಬಾಜೀರಾವ್ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**

A. ಬಾಜೀರಾವ್ ಅಧಿಕಾರಕ್ಕೆ ಬಂದಾಗ ಇಪ್ಪತ್ತರ ತರುಣ. ಈತನು ಬಲಿಷ್ಠನೂ ರಾಜತಂತ್ರ ನಿಪುಣನೂ ಆಗಿದ್ದನು ☑

B. . ಮೊಗಲ ಸಾಮ್ರಾಜ್ಯದ ರಾಜಕೀಯ ದುಸ್ಥಿತಿಯನ್ನು ಬಳಸಿಕೊಂಡು, ಭಾರತದಲ್ಲಿ ಬೃಹತ್ ಸಾಮ್ರಾಜ್ಯವನ್ನು ಕಟ್ಟುವ ಯೋಜನೆಯನ್ನು ಹಾಕಿಕೊಂಡನು. ಈತನು ಪ್ರಾರಂಭದಲ್ಲಿ ಹೈದರಾಬಾದ್, ಆಮೇಲೆ ಮಾಳ್ವ, ಗುಜರಾತ್ ಮತ್ತು ಬುಂದೇಲಖಂಡಗಳನ್ನು ವಶಪಡಿಸಿಕೊಂಡನು. ☑



Scanned with OKEN Scanner

C. ಬಾಜೀರಾವ್ ಪ್ರಮುಖ ಸಾಧನೆಯೆಂದರೆ ಸೇನಾ ಸಮೇತನಾಗಿ ಉತ್ತರ ಭಾರತಕ್ಕೆ ಮುನ್ನಡೆದು ದಿಲ್ಲಿಯ ಮೇಲೆರಗಿದ್ದು, ☑

D. ಈತನು ಎರಡನೆಯ ಶಿವಾಜಿ' ಎಂಬ ಕೀರ್ತಿಗೆ ಪಾತ್ರನಾದ, 'ಹಿಂದೂ ಪಾದಪದಷಾಹಿ' ಹಿಂದುಗಳ ಪ್ರಾಬಲ್ಯವಿರುವ ಪ್ರದೇಶಗಳಲ್ಲಿ ಅವರ ಆಡಳಿತವಿರಬೇಕೆಂಬ ವಾದ ತನ್ನ ಧ್ಯೆಯವೆಂದು ಈತನು ಹೇಳಿಕೊಂಡನು. ☑

ಮೇಲಿನ ಎಲ್ಲ ಆಯ್ಕೆ ಸರಿಯಾಗಿದೆ.

**5. 3ನೇ ಪಾಣಿಪತ್ ಕದನ - ಜನವರಿ 14, 1761**

- ಮರಾಠರು, ಆಫ್ಘನ್ ದಾಳಿಕೋರ ಅಹಮದ್ ಷಾ ಅಬ್ದಾಲಿಯನ್ನು ಮುಖಾಮುಖಿಯಾದರು.
- 1761ರಲ್ಲಿ (ಜನವರಿ 14ರಂದು) ಅವರೊಳಗೆ ನಿರ್ಣಾಯಕ ಕದನ ನಡೆಯಿತು. ಇದೇ ಮೂರನೇ ಪಾಣಿಪತ್ ಕದನ.
- ಮರಾಠರು ಯುದ್ಧದಲ್ಲಿ ಸೋತುಹೋದರು. ಇದರ ಪರಿಣಾಮವಾಗಿ ಮರಾಠರ ಸೈನಿಕ ಶಕ್ತಿ ಕುಂದಿತು.

**6.ಆರ್ಕಾಟ್ ನವಾಬಗಿರಿಯ ಉತ್ತರಾಧಿಕಾರಕ್ಕಾಗಿ ಯಾರ ಯಾರ ನಡುವೆ ಕಲಹ ಉಂಟಾಯಿತು - ಚಂದಾಸಾಹೇಬ್ ಮತ್ತು ಮಹಮ್ಮದ್ ಆಲಿ**

**7. ಪ್ಲಾಸಿ ಕದನಕ್ಕೆ ಸಂಬಂಧಿಸಿದಂತೆ ಸರಿಯಾದ ಕಾರಣಗಳನ್ನು ಗುರುತಿಸಿ**



Scanned with OKEN Scanner

A. ನವಾಬ ಸಿರಾಜನು ಯುವಕನಾದ್ದರಿಂದ ಇಂಗ್ಲಿಷರು ಅವನನ್ನು ಕಡೆಗಣಿಸಿ ಅವನ ಅನುಮತಿ ಪಡೆಯದೆ ಕಲ್ಕತ್ತದಲ್ಲಿ ಫೋರ್ಟ್ ವಿಲಿಯಂ ಕೋಟೆಯನ್ನು ಬಲಪಡಿಸಿದರು. ☑

B. ಅಲ್ಲದೆ ವ್ಯಾಪಾರದ ರಿಯಾಯಿತಿಗಳನ್ನು ದುರುಪಯೋಗ ಮಾಡುತ್ತಿದ್ದರು. ಇಂಗ್ಲಿಷರು ತನ್ನ ಆದೇಶಗಳನ್ನು ಪಾಲಿಸದೆ, ತನ್ನ ವೈರಿಗಳೊಡನೆ ಸೇರಿ ಕುತಂತ್ರ ಮಾಡುತ್ತಿದ್ದಾರೆಂದು ನವಾಬನು ಭಾವಿಸಿದನು. ಅದರಿಂದ ಕೋಪಗೊಂಡು ಇಂಗ್ಲಿಷ್ ಕೋಠಿಗಳನ್ನು ಸ್ವಾಧೀನ ಪಡಿಸಿಕೊಂಡನು. ಇದೇ ಮುಂದೆ ಪ್ಲಾಸಿ ಕದನಕ್ಕೆ ಕಾರಣವಾಯಿತು. ☑

**A & B ಎರಡೂ ಸರಿ**

**8. ಪ್ಲಾಸಿ ಕದನ ನಡೆದ ವರ್ಷ -1757 ಜೂನ್ 23**

- ಬ್ರಿಟಿಷರು ಮತ್ತು ಸಿರಾಜ್ ಉದ್ದೌಲನ ಸೈನ್ಯದ ನಡುವೆ ಪ್ಲಾಸಿ ಎಂಬಲ್ಲಿ 1757ರಲ್ಲಿ ಯುದ್ಧವಾಯಿತು.
- ಯುದ್ಧದಲ್ಲಿ ಮೀರ್ ಜಾಫರನು ಬ್ರಿಟಿಷರಿಗೆ ನೆರವಾದನು. ಅಂತಿಮವಾಗಿ ಸಿರಾಜ್ ಉದ್ದೌಲ ಸೋತು ಕೊಲ್ಲಲ್ಪಟ್ಟನು,
- ಮೀರ್ ಜಾಫರನು ಮಾಡಿದ ದ್ರೋಹದಿಂದ ಬ್ರಿಟಿಷರಿಗೆ ಜಯ ಲಭಿಸಿತು.

**9. ಪ್ಲಾಸಿ ಕದನದ ನಂತರ ಬಂಗಾಳದ ನವಾಬನಾದವನು ಯಾರು**

- ಮೀರ್ ಜಾಫರ್

**10. ಪ್ಲಾಸಿ ಕದನದ ನಂತರ ಬ್ರಿಟೀಷರು ಯಾವ ಪ್ರದೇಶದ ಜಮೀನ್ದಾರಿ ಹಕ್ಕನ್ನು ಪಡೆದರು -**



Scanned with OKEN Scanner

- 24 ಪರಗಣ ಪ್ರದೇಶ

ಮುಖ್ಯ ಇಸವಿಗಳು

- **1711-1761** - ಭಾರತದಲ್ಲಿ ಮರಾಠರ ಪರಮಾಧಿಕಾಲದ ಕಾಲ
- **1739**- ನಾದಿರ್‌ಷಾ ಮೊಗಲ ರಾಜ್ಯದ ಮೇಲೆ ದಾಳಿ ಮಾಡಿದ್ದು,
- **1757** - ಪ್ಲಾಸಿ ಕದನ
- **1761** – ಮೂರನೇ ಪಾಣಿಪತ್ ಕದನ

## ಅಧ್ಯಾಯ -5
## ಬ್ರಿಟಿಷ್ ಪ್ರಾಬಲ್ಯದ ಬೆಳವಣಿಗೆ
## (1758-1856)

1.ಈಸ್ಟ್ ಇಂಡಿಯಾ ಕಂಪನಿ ಬಂಗಾಳದ ಪ್ರಥಮ ಗವರ್ನರ್ ಆಗಿ ಯಾರನ್ನು ನೇಮಿಸಿತು

- ರಾಬರ್ಟ್ ಕ್ಲೈವ್ (1758)

2.ಮೀರ್ ಜಾಫರ್‌ನನ್ನು ಪದಚ್ಯುತಗೊಳಿಸಿದವರು - ಇಂಗ್ಲೀಷರು

3.ಬಂಗಾಳದ ನವಾಬ ಮೀರ್‌ಜಾಫರ್ ಪದಚ್ಯುತಗೊಂಡ ವರ್ಷ – **1760**



Scanned with OKEN Scanner

4.ಮೀರ್‌ಜಾಫರ್‌ನ ನಂತರ ಬಂಗಾಳದ ನವಾಬನಾದವನು - ಮೀರ್ ಖಾಸಿಂ

5.ಬಕ್ಸಾರ್ ಕದನ ನಡೆದ ವರ್ಷ - (1764)

6.ಬಕ್ಸಾರ್ ಕದನದ ವೇಳೆ ಮೀರ್ ಖಾಸಿಂನ ಒಕ್ಕೂಟದಲ್ಲಿದ್ದವರು - ಅವಧ್ ನ ನವಾಬ ಷುಜಾ ಉದ್ದೌಲ ಮೊಘಲ್ ದೊರೆ 2ನೇ ಷಾ ಆಲಂ,

7.ಬ್ರಿಟನ್ ವರ್ತಕರು ತೆರಿಗೆ ನೀಡದೆ ವ್ಯಾಪಾರ ಕೈಗೊಳ್ಳಲು ನೀಡಲಾದ ವಿಶೇಷ ಅನುಮತಿ ಪತ್ರವನ್ನು' ದಸ್ತಕ್ 'ಎಂದು ಕರೆಯಲಾಗಿದೆ.

8.ದಿವಾನಿ ಹಕ್ಕಿನ ಪ್ರಾಪ್ತಿಗೆ (1765) ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ

A. ಕಂಪನಿಯ ವ್ಯವಹಾರಗಳನ್ನು ಸುವ್ಯವಸ್ಥೆಗೊಳಿಸಲು ಬ್ರಿಟಿಷ್ ಸರ್ಕಾರ ಕ್ಲೈವನನ್ನು ಮತ್ತೊಮ್ಮೆ ಭಾರತಕ್ಕೆ ಗವರ್ನರನನ್ನಾಗಿ ಕಳುಹಿಸಿತು.☑

B. ಆತನು ಇಲ್ಲಿಗೆ ಬಂದೊಡನೆ ಕಂಪನಿಯ ಅಧಿಕಾರವನ್ನು ಕಾನೂನುಬದ್ಧಗೊಳಿಸಲು ಮುಂದಾಗಿ, ಮೊಗಲ್ ರಾಜ ಎರಡನೆ ಷಾಲಂನೊಡನೆ ಒಪ್ಪಂದವನ್ನು ಮಾಡಿಕೊಂಡನು ಒಪ್ಪಂದದಂತೆ ಕಂಪನಿಯು ಪ್ರತಿವರ್ಷ 26 ಲಕ್ಷ ರೂಪಾಯಿಯನ್ನು ಮೊಗಲ್ ರಾಜನಿಗೆ ನೀಡಬೇಕೆಂದು ನಿರ್ಧರಿಸಲಾಯಿತು.☑

C. ಇದಕ್ಕೆ ಪ್ರತಿಯಾಗಿ ಬ್ರಿಟಿಷರು ಬಂಗಾಳ (ಅಸ್ಸಾಂ ಸಹಿತ), ಬಿಹಾರ ಮತ್ತು ಓರಿಸ್ಸ ಪ್ರಾಂತ್ಯಗಳ 'ದಿವಾನಿ' ಹಕ್ಕನ್ನು ಪಡೆದರು. ದಿವಾನಿಯೆಂದರೆ ಭೂಕಂದಾಯವನ್ನು ಸಂಗ್ರಹಿಸುವ ಹಕ್ಕು.☑

ಮೇಲಿನ ಎಲ್ಲ ಆಯ್ಕೆ ಸರಿಯಾಗಿದೆ

9. ರೆಗ್ಯುಲೇಟಿಂಗ್ ಆಕ್ಟ್ ಗೆ (1773)ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ



Scanned with OKEN Scanner

A. ಈಸ್ಟ್ ಇಂಡಿಯಾ ಕಂಪನಿಯಲ್ಲಿ ಕೆಲಸಮಾಡುತ್ತಿದ್ದ ಬ್ರಿಟಿಷ್ ಅಧಿಕಾರಿಗಳು ಅನೈತಿಕ ಮಾರ್ಗದಿಂದ ಹಣವನ್ನು ಕೊಳ್ಳೆಹೊಡೆಯತೊಡಗಿದರು. ಈ ಹಿನ್ನೆಲೆಯಲ್ಲಿ ಇಂಗ್ಲೆಂಡಿನ ಸರಕಾರ ಕಂಪನಿಯ ಚಟುವಟಿಕೆಗಳನ್ನು ವ್ಯವಸ್ಥಿತಗೊಳಿಸಿ, ಅದನ್ನು ಹತೋಟಿಯಲ್ಲಿಡಲು ನಿರ್ಧರಿಸಿತು. ☑

B. ಈ ನಿಟ್ಟಿನಲ್ಲಿ ಬ್ರಿಟಿಷ್ ಸಂಸತ್ತು 'ರೆಗ್ಯುಲೇಟಿಂಗ್ ಆಕ್ಟ್' ಎಂಬ ಕಾಯಿದೆಯನ್ನು ಜಾರಿಗೆ ತಂದಿತು. ಕಾಯಿದೆಯ ಪ್ರಕಾರ ವಾರನ್ ಹೇಸ್ಟಿಂಗ್ಸ್ ನು ಪ್ರಥಮ ಗವರ್ನರ್ ಜನರಲ್ ಆಗಿ ನೇಮಿಸಲ್ಪಟ್ಟನು. ಅನಂತರ ಇಪ್ಪತ್ತಕ್ಕಿಂತಲೂ ಹೆಚ್ಚು ಮಂದಿ ಗವರ್ನರ್ ಜನರಲ್‌ಗಳು ಆಡಳಿತ ನಡೆಸಿದರು. ☑

C. ಈ ಅವಧಿಯಲ್ಲಿ ಬ್ರಿಟಿಷರು ಕಲ್ಕತ್ತವನ್ನು ತಮ್ಮ ಅಧಿಕಾರದ ಕೇಂದ್ರ ಸ್ಥಾನವನ್ನಾಗಿ ಪರಿವರ್ತಿಸಿಕೊಂಡು ಪ್ರಾಂತೀಯ ಸರಕಾರಗಳ ಕಾರ್ಯವೈಖರಿಯನ್ನು ತಮ್ಮ ಹತೋಟಿಗೆ ತೆಗೆದುಕೊಂಡರು. ☑

ಮೇಲಿನ ಎಲ್ಲ ಆಯ್ಕೆ ಸರಿಯಾಗಿದೆ

**10.ರೆಗ್ಯುಲೇಟಿಂಗ್ ಕಾಯ್ದೆಯ ಲೋಪದೋಷಗಳನ್ನು ಸರಿಪಡಿಸಲು 1784ರಲ್ಲಿ ಬ್ರಿಟಿಷ್ ಸರಕಾರ ಪಿಟ್ಸ್ ಇಂಡಿಯ ಕಾಯ್ದೆಯನ್ನು ಜಾರಿಗೊಳಿಸಿತು.**

- **ಆಂಗ್ಲೋ ಮೈಸೂರು ಯುದ್ಧಗಳು (1767-1799)**

| | | |
|---|---|---|
| 1ನೇ ಆಂಗ್ಲೋ ಮೈಸೂರು ಯುದ್ಧ | 1767-69 | ಮದ್ರಾಸ್ ಒಪ್ಪಂದ |
| 2ನೇ ಆಂಗ್ಲೋ ಮೈಸೂರು | 1780-84 | ಮಂಗಳೂರು ಒಪ್ಪಂದ |



Scanned with OKEN Scanner

| | | |
|---|---|---|
| ಯುದ್ಧ | | |
| 3ನೇ ಆಂಗ್ಲೋ ಮೈಸೂರು ಯುದ್ಧ | 1790-92 | ಶ್ರೀರಂಗಪಟ್ಟಣ ಒಪ್ಪಂದ |
| 4ನೇ ಆಂಗ್ಲೋ ಮೈಸೂರು ಯುದ್ಧ | 1798-99 | ಮೈಸೂರಿನ ಒಡೆಯರೊಂದಿಗೆ ಶ್ರೀರಂಗಪಟ್ಟಣ ಒಪ್ಪಂದ |

### ಆಂಗ್ಲೋ ಮರಾಠ ಯುದ್ಧಗಳು

ಮೊದಲ ಆಂಗ್ಲೋ ಮರಾಠ ಯುದ್ಧ (1775-1782)- ಸಾಲ್ ಬಾಯ್ ಒಪ್ಪಂದ

ಎರಡನೇ ಆಂಗ್ಲೋ ಮರಾಠ ಯುದ್ಧ (1803-1806) - ಬೆಸ್ಸಿನ್ ಒಪ್ಪಂದ

ಮೂರನೇ ಆಂಗ್ಲೋ ಮರಾಠ - ಪೇಶ್ವೆ ಎರಡನೇ ಬಾಜಿರಾಯನು ಬ್ರಿಟೀಷರ ವಿರುದ್ಧ 1818ರಲ್ಲಿ ಕೋರೆಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಸೋತು ಶರಣಾದನು

18ನೇ ಶತಮಾನದ ಉತ್ತರಾರ್ಧದಲ್ಲಿ ಸಿಖ್ಖರಲ್ಲಿ ಅನೇಕ ಪಂಗಡಗಳಿದ್ದವು. ಇಂತಹ ಪಂಗಡವನ್ನು 'ಮಿಸಲ್ (misl) ಎನ್ನುವರು.

11. ರಣಜಿತ್ ಸಿಂಗ್ ಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ

A. ರಣಜಿತ್ ಸಿಂಗ್ ಎಂಬ ಪರಾಕ್ರಮಿ ಯುವಕನು ಮಿಸಲ್ ವೊಂದರ ನಾಯಕನಾಗಿದ್ದನು.☑



Scanned with OKEN Scanner

B. ಈತನು ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ಲಾಹೋರಿನ (ಪಂಜಾಬ್) ರಾಜನಾದನು. ಸಿಖ್ಖರನ್ನು ಒಗ್ಗೂಡಿಸಿ ಪ್ರಬಲ ರಾಜಕೀಯ ಶಕ್ತಿಯಾಗಿ ಮಾರ್ಪಡಿಸಿದ ಕೀರ್ತಿ ಈತನಿಗೆ ಸಲ್ಲುತ್ತದೆ ☑

C. . ಸಮಾರು ನಾಲ್ಕು ದಶಕಗಳ ಕಾಲ ಪಂಜಾಬ್ ರಾಜ್ಯವನ್ನಾಳಿದ ಈತನು ಆಧುನಿಕ ಭಾರತದ ಓರ್ವ ಸ್ಮರಣೀಯ ಮಹಾರಾಜನಾಗಿದ್ದಾನೆ. ☑

D. ರಣಜಿತ್ ಸಿಂಗನ ಮರಣಾನಂತರ (1839) ರಾಜ್ಯದಲ್ಲಿ ರಾಜಕೀಯ ಗೊಂದಲ ತಲೆದೋರಿತು. ☑

ಮೇಲಿನ ಎಲ್ಲ ಆಯ್ಕೆ ಸರಿಯಾಗಿದೆ

12. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದ ಗವರ್ನರ್ ಜನರಲ್

- ಲಾರ್ಡ್ ವೆಲ್ಲೆಸ್ಲಿ

13. "ದತ್ತು ಮಕ್ಕಳಿಗೆ ಹಕ್ಕಿಲ್ಲ' ಎಂಬ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿದನು

- ಲಾರ್ಡ್ ಡಾಲ್ ಹೌಸಿ

14.'ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ

A. 'ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ'ಯು ಲಾರ್ಡ್ ಡಾಲ್‌ಹೌಸಿ ಎಂಬ ಗವರ್ನರ್ ಜನರಲ್ ಜಾರಿಗೆ ತಂದ ಒಂದು ವಿಲಕ್ಷಣ ನೀತಿಯಾಗಿತ್ತು, ☑

B. ಯಾವುದೇ ಭಾರತದ ರಾಜನಿಗೆ ಮಕ್ಕಳಿಲ್ಲದಿದ್ದರೆ ದತ್ತುಪುತ್ರನಿಗೆ ಪಟ್ಟವೇರುವ ಹಕ್ಕಿಲ್ಲವೆಂದು ಇದನ್ನು ಘೋಷಿಸಿದನು ಇದರಂತೆ ಪುತ್ರ ಸಂತಾನವಿಲ್ಲದೆ ತೀರಿಕೊಂಡ ಅರಸರ ರಾಜ್ಯಗಳು ಬ್ರಿಟಿಷರ ವಶವಾದವು. ☑



Scanned with OKEN Scanner

C. ಈ ಕುಟಿಲ ನೀತಿಯ ಪರಿಣಾಮವಾಗಿ ಔಧ್, ಸತಾರಾ, ನಾಗಪುರ ಮತ್ತು ಝಾನ್ಸಿ ಮುಂತಾದ ಹನ್ನೊಂದು ರಾಜ್ಯಗಳು ನೇರವಾಗಿ ಬ್ರಿಟಿಷರ ವಶವಾದುವು. ☑

ಮೇಲಿನ ಎಲ್ಲ ಆಯ್ಕೆ ಸರಿಯಾಗಿದೆ

ಮುಖ್ಯ ಇಸವಿಗಳು

1. 1764 - ಬಕ್ಸಾರ್ ಕದನ
2. 1765 - ದಿವಾನಿ ಹಕ್ಕಿನ ಪ್ರಾಪ್ತಿ
3. 1799-1805 - ವೆಲ್ಲೆಸ್ಲಿಯ ಆಡಳಿತ - ಸಹಾಯಕ ಸೈನ್ಯ ಪದ್ಧತಿ
4. 1848- ಡಾಲ್ ಹೌಸಿಯ ಆಡಳಿತ - ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ



Scanned with OKEN Scanner

## ಅಧ್ಯಾಯ- 6

## ಮೈಸೂರು ಮತ್ತು ಇತರ ಸಂಸ್ಥಾನಗಳು

ಒಡೆಯರ ರಾಜಧಾನಿ ಮೈಸೂರು, ರಾಜ್ಯದ ಲಾಂಛನ ಗಂಡಭೇರುಂಡ, ಮೈಸೂರಿಗೆ ನವರಾತ್ರಿ ಉತ್ಸವ (ದಸರಾ) ಒಂದು ಸಂಭ್ರಮದ ಸಮಾರಂಭ

1.ಮೈಸೂರು ಒಡೆಯರ ಆಳ್ವಿಕೆ ಪ್ರಾರಂಭಿಸಿದವರು - ಯದುರಾಯ ಮತ್ತು ಕೃಷ್ಣರಾಯ ಎಂಬ ಸಹೋದರರು.

2. ಮೈಸೂರಿನಲ್ಲಿ ಒಡೆಯರ ಆಳ್ವಿಕೆ ಆರಂಭವಾದ ವರ್ಷ – 1399

3. ಮೈಸೂರು ಅರಮನೆಯನ್ನು ಹೊಸದಾಗಿ 1912ರಲ್ಲಿ ಕಟ್ಟಲಾಯಿತು

4. ಅರಮನೆಯ ಸಭಾಂಗಣವನ್ನು (ದರ್ಬಾರ್ ಹಾಲ್) ಪ್ರಸಿದ್ಧ ಚಿತ್ರಕಲಾಕಾರ ಶೃಂಗರಿಸಿದನು - ರಾಜಾ ರವಿವಮ

5.ಅಠಾರ ಕಛೇರಿಯನ್ನು ಸ್ಥಾಪಿಸಿದ ಒಡೆಯರು - ಚಿಕ್ಕದೇವರಾಜ ಒಡೆಯರು

6. ಮೈಸೂರು ಸಂಸ್ಥಾನದಲ್ಲಿ ಅಂಚೆ ಇಲಾಖೆಯನ್ನು ಆರಂಭಿಸಿದ ಒಡೆಯರು – ಚಿಕ್ಕದೇವರಾಜ ಒಡೆಯರು

7. 'ನವಕೋಟಿ ನಾರಾಯಣ' ಎಂಬ ಬಿರುದನ್ನು ಹೊಂದಿದ್ದ ಒಡೆಯರು - ಚಿಕ್ಕದೇವರಾಜ ಒಡೆಯರು TET ಇಲಾಖೆ ಮಾದರಿ





Scanned with OKEN Scanner

8. ಚಿಕ್ಕದೇವರಾಜನ ಆಸ್ಥಾನದಲ್ಲಿದ್ದ ಸಿಂಗರಾರ್ಯನ ಕನ್ನಡದ ಮೊತ್ತಮೊದಲನೆಯ ನಾಟಕ ಯಾವುದು - ಮಿತ್ರವಿಂದಾ ಗೋವಿಂದ

9. 'ಹದಿಬದೆಯ ಧರ್ಮ' ಎಂಬ ಕೃತಿಯು ಸಂಚಿ ಹೊನ್ನಮ್ಮಳ ಕಾವ್ಯ

10. ಹೈದರ್ ಅಲಿಯು ಯಾರ ಸೇನೆಯಲ್ಲಿ ಸೇನಾನಿಯಾಗಿದ್ದನು

- ದಳವಾಯಿ ನಂಜರಾಜ

11.ಹೈದರ್ ಅಲಿಯ ಸಾಧನೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ.

A.ಹೈದರನಿಗೆ ಓದುಬರಹ ಬರುತ್ತಿರಲಿಲ್ಲವಾದರೂ ಕನ್ನಡ ಸೇರಿದಂತೆ ಹಲವು ಭಾಷೆಗಳನ್ನು ಚೆನ್ನಾಗಿ ಬಲ್ಲವನಾಗಿದ್ದ ☑

B.ಅವನು ಮೈಸೂರು ರಾಜ್ಯದ ವಿಸ್ತಾರವನ್ನು ಇಮ್ಮಡಿಗೊಳಿಸಿದ, ಶೂರ ಯೋಧನೂ ದಕ್ಷ ಆಡಳಿತಗಾರನೂ ಆಗಿದ್ದ ಹೈದರ ಅಲಿಗೆ ಕರ್ನಾಟಕದ ಇತಿಹಾಸದಲ್ಲಿ ಪ್ರಮುಖ ಸ್ಥಾನವಿದೆ ☑

C. ಬೆಂಗಳೂರಿನ ಸುಂದರ ಉದ್ಯಾನವನ ಲಾಲ್ ಬಾಗ್ ಅವನಿಂದಲೇ ಆರಂಭ ಆದುದು ☑

ಮೇಲಿನ ಎಲ್ಲವೂ ಸರಿ

12.ತನ್ನನ್ನು ಸುಲ್ತಾನನೆಂದು ಘೋಷಿಸಿ ತನ್ನ ರಾಜ್ಯ 'ದೈವದತ್ತ'ವೆಂದು ಪ್ರಕಟಿಸಿಕೊಂಡವನು ಯಾರು .- ಟಿಪ್ಪು ಸುಲ್ತಾನ್



Scanned with OKEN Scanner

13. ಎರಡನೇ ಆಂಗ್ಲೋ ಮೈಸೂರು ಯುದ್ಧವನ್ನು ಅಂತ್ಯಗೊಳಿಸಿದ ಒಪ್ಪಂದ - ಮಂಗಳೂರು ಒಪ್ಪಂದ

14. ಮೂರನೆಯ ಆಂಗ್ಲೋ ಮೈಸೂರು ಯುದ್ಧಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ..

A.ಮೂರನೆಯ ಮೈಸೂರು ಯುದ್ಧದಲ್ಲಿ ಬ್ರಿಟಿಷರು ಆಕ್ರಮಣ ಮಾಡುತ್ತಾ ರಾಜಧಾನಿಯಾದ ಶ್ರೀರಂಗಪಟ್ಟಣವನ್ನು ಮುತ್ತಿಗೆ ಹಾಕಿದರು.☑

B. ಬೇರೆ ಮಾರ್ಗ ತೋಚದೆ ಟಿಪ್ಪು ಬ್ರಿಟಿಷರೊಡನೆ ಶ್ರೀರಂಗಪಟ್ಟಣ ಒಪ್ಪಂದ ಮಾಡಿಕೊಂಡನು.☑

C.ಶಾಂತಿ ಒಪ್ಪಂದದಂತೆ ಅವನು ಅರ್ಧರಾಜ್ಯವನ್ನು ಬ್ರಿಟಿಷರಿಗೆ ಒಪ್ಪಿಸಿದನು. ಅಪಾರ ಪರಿಹಾರ ಧನವನ್ನು ಅವರಿಗೆ ನೀಡಬೇಕಾಯಿತು. ತನ್ನಿಬ್ಬರು ಮಕ್ಕಳನ್ನು ಕೂಡ ಬ್ರಿಟಿಷರಿಗೆ ಒತ್ತೆಯಾಳಾಗಿ ಕೊಡಬೇಕಾಯಿತು.☑

ಮೇಲಿನ ಎಲ್ಲವೂ ಸರಿಯಾಗಿದೆ

15. ಟಿಪ್ಪು ಸುಲ್ತಾನನ ಮರಣಾನಂತರ ಮೈಸೂರು ರಾಜ್ಯ ಬ್ರಿಟಿಷರ ವಶವಾಯಿತು,

16. ಬ್ರಿಟಿಷರು ಒಡೆಯರ ರಾಜವಂಶದ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ರಾಜ್ಯವನ್ನು ಹಸ್ತಾಂತರಿಸಿದರು. ಆದರೆ ಮೈಸೂರು ಬ್ರಿಟಿಷರ ಆಶ್ರಿತ ರಾಜ್ಯವಾಯಿತು.

## ಕೆಳದಿ, ಚಿತ್ರದುರ್ಗ ಮತ್ತು ಯಲಹಂಕ



Scanned with OKEN Scanner

## ಕೆಳದಿಯ ನಾಯಕರು

- ನಾಯಕರು: ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿ ಅನೇಕ ಚಿಕ್ಕಪುಟ್ಟ ಅರಸರಿದ್ದರು. ಇವರೇ ನಾಯಕರು ಅಥವಾ ಪಾಳೆಯಗಾರರು ಪಾಳೆಯಗಾರರ ವಶವಿದ್ದ ಸೀಮೆಯನ್ನು ಪಾಳೆಯಪಟ್ಟು ಎನ್ನುತ್ತಿದ್ದರು. ನಾಯಕರಲ್ಲಿ ಕೆಳದಿ ಮತ್ತು ಚಿತ್ರದುರ್ಗದ ನಾಯಕರು ಪ್ರಸಿದ್ಧರು.

**1.ಹಿರಿಯ ವೆಂಕಟಪ್ಪ ನಾಯಕ ಸಾಧನೆಗೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ.**

A.ವೆಂಕಟಪ್ಪ ನಾಯಕನು ಕೆಳದಿ ಅರಸರಲ್ಲೇ ಅತ್ಯಂತ ಪ್ರಖ್ಯಾತನಾಗಿದ್ದನು. ಇವನ ಕಾಲದಲ್ಲಿ ಕೆಳದಿ ರಾಜ್ಯವು ಪೂರ್ಣ ಸ್ವತಂತ್ರವಾಯಿತು.☑

B..ಈತನು ಕರಾವಳಿಯಲ್ಲಿ ಚಂದ್ರಗಿರಿ ನದಿಯವರೆಗೆ ವಿಜಯಯಾತ್ರೆ ಮಾಡಿದನು.☑

C.ಉಳ್ಳಾಲದ ರಾಣಿ ಅಬ್ಬಕ್ಕಳ ನೆರವಿನಿಂದ ಪೋರ್ಚುಗೀಸರನ್ನು ಮಂಗಳೂರಿನಲ್ಲಿ ಈತನು ಸೋಲಿಸಿದನು.☑

D.ವಿಜಯಪುರದ ಆದಿಲ್ ಷಾಹಿ ಸೇನೆಯನ್ನು ಸೋಲಿಸಿ, ಹಾನಗಲ್ ನಲ್ಲಿ ವಿಜಯಸ್ತಂಭ ಸ್ಥಾಪಿಸಿದರು, ಸಕಲ ಮತಗಳಿಗೆ ಈತನು ಪ್ರೋತ್ಸಾಹ ನೀಡಿದನು.☑

ಮೇಲಿನ ಎಲ್ಲವೂ ಸರಿಯಾಗಿದೆ

**2.ಶಿವಪ್ಪ ನಾಯಕಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ.**



Scanned with OKEN Scanner

A.ಶಿವಪ್ಪ ನಾಯಕ ಕೆಳದಿಯ ಪ್ರಸಿದ್ಧ ಅರಸನಾಗಿದ್ದನು ಇವನು ಕರಾವಳಿಯ ಪೋರ್ಚುಗೀಸರ ಕೋಟೆಗಳನ್ನು ವಶಪಡಿಸಿಕೊಂಡು 'ಪಡುಗಡಲೊಡೆಯ' ಎನಿಸಿದನು.☑

B. ರಾಜ್ಯದ ರಕ್ಷಣೆಗಾಗಿ ಬೇಕಲ ಮತ್ತು ಚಂದ್ರಗಿರಿ (ಕೇರಳ) ಹಾಗೂ ಮಂಗಳೂರು ಮುಂತಾದೆಡೆಗಳಲ್ಲಿ ಭದ್ರವಾದ ಕೋಟೆಗಳನ್ನು ಕಟ್ಟಿಸಿದನು☑

C. ಧರ್ಮ ಶ್ರದ್ಧೆಯುಳ್ಳವನಾದ ಶಿವಪ್ಪ ನಾಯಕನು ವಾಜಪೇಯ ಮುಂತಾದ ವೈದಿಕ ಯಜ್ಞಗಳನ್ನು ಮಾಡಿಸಿದನು.☑

ಮೇಲಿನ ಎಲ್ಲವೂ ಸರಿಯಾಗಿದೆ

3.ಗೋವೆಯ ಕ್ರೈಸ್ತರನ್ನು ಶಿವಪ್ಪ ನಾಯಕನು ಹೇಗೆ ಪ್ರೋತ್ಸಾಹಿಸಿದನು - ಗೋವೆಯ ಕ್ರೈಸ್ತರು ಕೃಷಿಯಲ್ಲಿ ನಿಪುಣರಾದುದರಿಂದ ಅವರಿಗೂ ತನ್ನ ರಾಜ್ಯಕ್ಕೆ ವಲಸೆ ಬರಲು ಪ್ರೋತ್ಸಾಹಿಸಿ, ಭೂಮಿ ಕಾಣಿಕೆಗಳನ್ನು ಕೊಟ್ಟನು.

4.ಶಿವಪ್ಪನಾಯಕನ ಶಿಸ್ತುಗೆ ಸಂಬಂಧಿಸಿದಂತೆ ಯಾವುದು ಸರಿಯಾಗಿದೆ ?

A. ಶಿವಪ್ಪ ನಾಯಕನು ಅಳವಡಿಸಿದ ಕಂದಾಯ ವ್ಯವಸ್ಥೆಯನ್ನು 'ಸಿಸ್ತು ಎಂದು ಕರೆಯಲಾಗಿದೆ. ಈ ಕಂದಾಯ ಪದ್ಧತಿಯಂತೆ ಭೂಕಂದಾಯವನ್ನು ನಿಗದಿಪಡಿಸಲು ಭೂಮಿಯನ್ನು ವರ್ಗೀಕರಿಸಲಾಗುತ್ತಿತ್ತು.☑

B. ಇಂಥ ಕ್ರಮಬದ್ಧ ಕಂದಾಯ ಪದ್ಧತಿಯನ್ನು 'ಶಿವಪ್ಪ ನಾಯಕನ ಸಿಸ್ತು ಎನ್ನುವರು. ಸಿಸ್ತು ಮಲೆನಾಡಿನ ಸಮೃದ್ಧಿಗೆ ಕಾರಣವಾಯಿತು.☑



Scanned with OKEN Scanner

A & B ಸರಿಯಾಗಿದೆ

5. ರಾಣಿ ಚೆನ್ನಮ್ಮಾಜಿಯು ಯಾರ ಸೈನ್ಯವನ್ನು ಹಿಮ್ಮೆಟ್ಟಿಸಿ ಶಿವಾಜಿಯ ಮಗ ಛತ್ರಪತಿ ರಾಜರಾಮನಿಗೆ ರಕ್ಷಣೆ ನೀಡಿದಳು - ಮೊಗಲರ ಸೈನ್ಯ

6. ಚಿತ್ರದುರ್ಗದ ನಾಯಕರಲ್ಲಿ ಅತ್ಯಂತ ಪ್ರಬಲ ಹಾಗೂ ಪ್ರಸಿದ್ಧನಾದವನು.
- 5ನೇ ಮದಕರಿ ನಾಯಕ

7.ಚಿತ್ರದುರ್ಗದ ಏಳು ಸುತ್ತಿನ ಕೋಟೆಯನ್ನು ನಿರ್ಮಿಸಿದ ಪಾಳೆಗಾರ
- 5ನೇ ಮದಕರಿ ನಾಯಕ

8. ಚಿತ್ರದುರ್ಗವನ್ನು ಮುತ್ತಿ ವಶಪಡಿಸಿಕೊಂಡ ಮೈಸೂರಿನ ಸರ್ವಾಧಿಕಾರಿ
- ಹೈದರಾಲಿ

9.ಒಂದನೆಯ ಕೆಂಪೇಗೌಡನು ಬೆಂಗಳೂರು ನಗರದ ಸ್ಥಾಪಕನೆಂದು ಹೆಸರುವಾಸಿಯಾಗಿದ್ದಾನೆ.

10. ಒಂದನೆಯ ಕಂಪೇಗೌಡನು ನಿರ್ಮಿಸಿದ ನಾಲ್ಕು ಕೆರೆಗಳೆಂದರೆ ಕೆಂಪಾಂಬುಧಿ, ಧರ್ಮಾಂಬುಧಿ, ಹಲಸೂರು ಹಾಗೂ ಸಂಪಂಗಿ,

11. ಒಂದನೆಯ ಕೆಂಪೇಗೌಡ ಬಿರುದು - 'ಪ್ರಜಾವತ್ಸಲ



Scanned with OKEN Scanner

12.ಬೆಂಗಳೂರು ನಗರದ ಎಲ್ಲೆಕಟ್ಟುಗಳನ್ನು ಗುರುತಿಸಿ ನಾಲ್ಕು ಗೋಪುರಗಳನ್ನು ಯಾರು ಕಟ್ಟಿಸಿದರು - 2ನೇ ಕೆಂಪೇಗೌಡ

ಕೊಡಗು, ಕಿತ್ತೂರು, ತುಳುನಾಡು ಮತ್ತು ಹೈದರಾಬಾದ್-ಕರ್ನಾಟಕ

1.ಕೊಡಗನ್ನು ಆಳಿದ ಪ್ರಮುಖ ರಾಜವಂಶವೆಂದರೆ ಹಾಲೇರಿ ಅರಸುಮನೆತನ.

- 17ನೇ ಶತಮಾನದ ಆರಂಭದಲ್ಲಿ ಇದನ್ನು ವೀರರಾಜನು ಸ್ಥಾಪಿಸಿದನು.

2.ಮುದ್ದುರಾಜನು ಮುದ್ದುರಾಜಕೇರಿಯನ್ನು ಕಟ್ಟಿಸಿ ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು, ಮುದ್ದುರಾಜಕೇರಿಯೇ ಮಡಿಕೇರಿಯಾಗಿದೆ.

3.ಕೊಡಗಿನ ಕೊನೆಯ ಅರಸ - ಚಿಕ್ಕವೀರರಾಜೇಂದ್ರ

4.ಕೆನರಾ ಜಿಲ್ಲೆಯಲ್ಲಿ ರೈತರ ಮೇಲೆ ಕಂದಾಯ ಹೆಚ್ಚಾಗಿದ್ದುದರಿಂದ ಅಲ್ಲಿನ ರೈತರು. ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟ ಮಾಡಿದರು, ಅವರು ಬ್ರಿಟಿಷರನ್ನು ಕೊಡಗಿನಿಂದ ಓಡಿಸಲು ಸಂಕಲ್ಪಮಾಡಿದರು.

ಈ ಹೋರಾಟವೇ - 1837ರ ಅಮರಸುಳ್ಯ ಹೋರಾಟ

5. 1837ರ ಅಮರಸುಳ್ಯ ಹೋರಾಟದ ಪ್ರಮುಖ ನಾಯಕರು -

ಪುಟ್ಟಬಸಪ್ಪ, ಕಲ್ಯಾಣಸ್ವಾಮಿ ಮತ್ತು ಗುಡ್ಡೆಮನೆ ಅಪ್ಪಯ್ಯಗೌಡ

6. 1956ರಲ್ಲಿ ಕೊಡಗು ಕರ್ನಾಟಕದೊಂದಿಗೆ ವಿಲೀನವಾಯಿತು.





Scanned with OKEN Scanner

7. ಸ್ವತಂತ್ರ ಭಾರತದ ಭೂಸೇನೆ, ನೌಕಾದಳ ಮತ್ತು ವಾಯುಪಡೆಗಳಿಗೆ ಮೊದಲ ಅಧಿಪತಿಯಾಗಿದ್ದವರು - ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ

8.ಮಹಾನ್ ದೇಶಭಕ್ತ ಕೊಡಗಿನವರಾದ ಜನರಲ್ ಕೆ. ಎಸ್. ತಿಮ್ಮಯ್ಯ, ಅವರು ಭಾರತ ಮತ್ತು ಪಾಕಿಸ್ತಾನ ಯುದ್ಧದಲ್ಲಿ ಭಾರತದ ವಿಜಯಕ್ಕೆ ಕಾರಣರಾದರು.

9. ಬ್ರಿಟೀಷರ ವಿರುದ್ಧ ಹೋರಾಡಿದ ಕಿತ್ತೂರು ಸಂಸ್ಥಾನದ ರಾಣಿ

– ಚೆನ್ನಮ್ಮ

10. ದತ್ತುಸ್ವೀಕಾರ ಕ್ರಮಬದ್ಧವಲ್ಲ ಎಂದು ಕುಂಟುನೆಪ ತೆಗೆದನು. ಕಿತ್ತೂರಿನ ಆಡಳಿತವನ್ನು ಬ್ರಿಟಿಷ್ ಸರ್ಕಾರವೇ ವಹಿಸಬೇಕೆಂದು ಅವನು ಶಿಫಾರಸು ಮಾಡಿದವನು - ಧಾರವಾಡದ ಕಲೆಕ್ಟರ್ ಥ್ಯಾಕರೆ

11. ಕಿತ್ತೂರಿನ ಪರವಾಗಿ ಬ್ರಿಟೀಷರ ವಿರುದ್ಧ ಹೋರಾಡಿದ ಧೀರ

- ಸಂಗೊಳ್ಳಿ ರಾಯಣ್ಣ

12. ಸಂಗೊಳ್ಳಿ ರಾಯಣ್ಣನನ್ನು ಬ್ರಿಟೀಷರು ಗಲ್ಲಿಗೇರಿಸಿದ್ದು

- ನಂದಗಡದಲ್ಲಿ (1831 ಜನವರಿ 26)

13.ಪ್ರಾಚೀನ ಕಾಲದಲ್ಲಿ ಕರ್ನಾಟಕ ಕರಾವಳಿಯ ಒಂದು ಭಾಗವನ್ನು (ಹೆಚ್ಚು ಕಡಿಮೆ ಈಗಿನ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು) ತುಳುನಾಡು ಎಂದು ಕರೆಯಲಾಗುತ್ತಿತ್ತು,



Scanned with OKEN Scanner

**14. ಪುರಾಣ ಸಾಹಿತ್ಯದಲ್ಲಿ ಈ ಪ್ರದೇಶವು ಪರಶುರಾಮ ಕ್ಷೇತ್ರವೆನಿಸಿದೆ**

**- ತುಳುನಾಡು**

**15. ಚೌಟ ಅರಸು ಮನೆತನದ ಉಲ್ಲಾಳದ ಅಬ್ಬಕ್ಕ ರಾಣಿಯು (16ನೇ ಶತಮಾನ) ಪೋರ್ಚುಗೀಸರ ವಿರುದ್ಧ ಹೋರಾಟ ನಡೆಸಿ ಅವರನ್ನು ಸೋಲಿಸಿದ್ದಳು.**

**16. ತುಳುನಾಡಿನ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಕಾರ್ನಾಡು ಸದಾಶಿವರಾವ್ ಮತ್ತು ಅತ್ತಾವರ, ಯಲ್ಲಪ್ಪ ಅಗ್ರಗಣ್ಯರು**

**17. 1857 ರಲ್ಲಿ ಬ್ರಿಟಿಷರು ಜಾರಿಗೆ ತಂದ ಶಸ್ತ್ರಾಸ್ತ್ರ ಕಾಯಿದೆಯನ್ನು ವಿರೋಧಿಸಿ ಹಲಗಲಿಯಲ್ಲಿ ದಂಗೆಯೆದ್ದವರು - ಹಲಗಲಿ ಬೇಡರು**

**18. ಹಲಗಲಿ ದಂಗೆಯಲ್ಲಿ ಮೂರು ಜನ ಬ್ರಿಟಿಷ್ ಸೈನಿಕರನ್ನು ಗುಂಡಿಕ್ಕಿ ಕೊಂದ ಬೇಡರ ವೀರಮಹಿಳೆ - ರಾಮಿ**

**19. ಸಿಂಧೂರ ಲಕ್ಷ್ಮಣ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಓರ್ವ ಮಹಾವೀರ**

**20.ಸುರಪುರ ಸಂಸ್ಥಾನದಲ್ಲಿ ಬ್ರಿಟೀಷರ ವಿರುದ್ಧ ಹೋರಾಡಿ ಸೆರೆಸಿಕ್ಕವನು**

**- ವೆಂಕಟಪ್ಪ ನಾಯಕ**



Scanned with OKEN Scanner

21. ನಿಜಾಮನು 'ಕಾಲಾಗತ್ತಿ' ಎಂಬ 53 ಕರಾಳ ನಿಯಮಗಳನ್ನು ಜಾರಿಗೆ ತಂದು ಜನರ ಮೂಲಭೂತ ಸ್ವಾತಂತ್ರ್ಯವನ್ನು ಹತ್ತಿಕ್ಕಿದನು.

22. ಹೈದರಾಬಾದ್ ಸಂಸ್ಥಾನದ ಎಲ್ಲೆಡೆ ಸಂಚಾರ ಮಾಡಿ, ಅಹಿಂಸಾತ್ಮಕ ಸತ್ಯಾಗ್ರಹ ಚಳುವಳಿಯನ್ನು ಸಂಘಟಿಸಿದರು.

- ಸ್ವಾಮಿ ರಮಾನಂದ ತೀರ್ಥರು

23. ಕರ್ನಾಟಕದ ಗಾಂಧಿ' ಎಂದು ಹೆಸರಾದವರು - ಹರ್ಡೇಕರ್ ಮಂಜಪ್ಪ

24. 'ವಂದೇ ಮಾತರಂ' ಹೋರಾಟದ ಧೀರ ನಾಯಕರು ಯಾರು

- ರಾಮಚಂದ್ರ ರಾವ್

25. ಮುಸ್ಲಿಂ ಮೂಲಭೂತವಾದಿಗಳು ಇತ್ತೇಹಾದ್-ಉಲ್-ಮುಘಲ್‌ಮೀನ್' ಎಂಬ ಸಂಘವನ್ನು ಕಟ್ಟದರು.ಅದರ ಮುಖಂಡ ಕಾಪಿಂರಜನಿ

26. ಹೈದರಾಬಾದ್ ವಿಮೋಚನಾ ಸಂಗ್ರಾಮದಲ್ಲಿ ಭೂಗತ ಕಾರ್ಯಾಚರಣೆಯನ್ನು ಸಂಘಟಿಸಿದ ತರುಣ ನಾಯಕ

- ಶರಣಗೌಡ ಇನಾಂದಾರ್

27.ಭಾರತದ ಪ್ರಥಮ ಗೃಹ ಮಂತ್ರಿ – ಸರ್ದಾರ್ ವಲ್ಲಭಬಾಯಿ ಪಟೇಲ್

28.ಹೈದರಾಬಾದ್ ನಿಜಾಮನು ಶರಣಾಗಿ ಭಾರತದ ಒಕ್ಕೂಟಕ್ಕೆ ಸೇರಲು ಒಪ್ಪಿದ್ದು - ಸೆಪ್ಟೆಂಬರ್ 17 1948



Scanned with OKEN Scanner

29.ಹೈದರಾಬಾದ್ ನಿಜಾಮನ ಮೇಲೆ ಪೋಲೀಸ್ ಕಾರ್ಯಾಚರಣೆ ಮಾಡುವ ನಿರ್ಣಯ ಕೈಗೊಂಡವರು - ಸರ್ದಾರ್ ವಲ್ಲಭಭಾಯಿ ಪಟೇಲ್

ಅಧ್ಯಾಯ- 7

## ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

1.ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದವನು - ಲಾರ್ಡ್ ಕಾರ್ನವಾಲೀಸ್

2.1800 ರಲ್ಲಿ ನಾಗರಿಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣವನ್ನು ನೀಡಲು ಕಾರ್ನ್ ವಾಲೀಸನು ಕಲ್ಕತ್ತಾದಲ್ಲಿ ಪೋರ್ಟ್ ವಿಲಿಯಂ ಕಾಲೇಜನ್ನು ಸ್ಥಾಪಿಸಿದನು.

3. ಐ.ಸಿ.ಎಸ್ ICS (1863) ಪರೀಕ್ಷೆಯಲ್ಲಿ ತೇರ್ಗಡೆಯಾದ ಮೊಟ್ಟಮೊದಲ ಭಾರತೀಯರು - ಸತ್ಯೇಂದ್ರನಾಥ ಟಾಗೋರ್

4. ಬ್ರಿಟಿಷರ ಕಾಲದಲ್ಲಿ ಸೈನ್ಯಾಡಳಿತದಲ್ಲಿ ಒಬ್ಬ ಭಾರತೀಯ ಯೋಧ ಪಡೆಯಲು ಸಾಧ್ಯವಾಗುತ್ತಿದ್ದ ಅತ್ಯುನ್ನತ ಹುದ್ದೆ ಯಾವುದು - ಸುಬೇದಾರ್ ಹುದ್ದೆ

5. ಪ್ರಥಮವಾಗಿ ವ್ಯವಸ್ಥಿತವಾದ ಪೋಲಿಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದ ಗವರ್ನರ್ - ಲಾರ್ಡ್ ಕಾರ್ನವಾಲೀಸ್





Scanned with OKEN Scanner

6.ಪೊಲೀಸ್ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಗಳನ್ನು ಬ್ರಿಟಿಷ್ ಸರಕಾರ ತಂದ ವರ್ಷ - 1861

7.1774ರಲ್ಲಿ ವಾರೆನ್ ಹೇಸ್ಟಿಂಗ್ಸನು ಕಲ್ಕತ್ತದಲ್ಲಿ ಪ್ರಪ್ರಥಮ ಸುಪ್ರೀಂ ಕೋರ್ಟನ್ನು ಸ್ಥಾಪಿಸಿದನು.

8. ಬ್ರಿಟಿಷ್ ನ್ಯಾಯಾಂಗ ವ್ಯವಸ್ಥೆಯಲ್ಲಿನ ಎರಡು ಬಗೆಯ ನ್ಯಾಯಾಲಯಗಳು- ದಿವಾನಿ ಆದಾಲತ್ ಮತ್ತು ಫೌಜದಾರಿ ಅದಾಲತ್

9. ಬ್ರಿಟಿಷರ ಕಾಲದಲ್ಲಿ ಕೆಳದರ್ಜೆಯ ಕೋರ್ಟುಗಳಲ್ಲಿ ಮುನ್ಸಿಫ್ (Munsils) ಮತ್ತು ಅಮಿನ್ (Amins) ಎಂಬ ಭಾರತೀಯ ನ್ಯಾಯಾಧೀಶರು ಇರುತ್ತಿದ್ದರು.

10. ಖಾಯಂ ಜಮೀನ್ದಾರಿ ಪದ್ಧತಿ ಜಾರಿಗೆ ಬಂದ ವರ್ಷ -1793

11. ಖಾಯಂ ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದವನು

- ಲಾರ್ಡ್ ಕಾರ್ನವಾಲೀಸ್

12. ಗವರ್ನರ್ ಜನರಲ್' ಕಾರ್ನವಾಲೀಸನು ಬಂಗಾಳ, ಬಿಹಾರ, ಒರಿಸ್ಸಗಳಲ್ಲಿ ಭೂಕಂದಾಯವನ್ನು ಖಾಯಂ ನೆಲೆಯಲ್ಲಿ ನಿಗದಿಪಡಿಸಲು ನಿರ್ಧರಿಸಿದನು.

13. ಖಾಯಂ ಜಮೀನ್ದಾರಿ ಪದ್ಧತಿಯಲ್ಲಿ ಅತಿಯಾಗಿ ಶೋಷಣೆಗೊಳಗಾದವರು - ರೈತರು

14. ರೈತವಾರಿ ಪದ್ಧತಿ ಜಾರಿಗೆ ಬಂದ ವರ್ಷ - 1820



Scanned with OKEN Scanner

15. ರೈತವಾರಿ ಪದ್ಧತಿಯನ್ನು ಜಾರಿಗೆ ತಂದವರು - ಈ ಪದ್ಧತಿಯನ್ನು ಮದ್ರಾಸ್ ಪ್ರಾಂತ್ಯದಲ್ಲಿ ಸರ್ ಥಾಮಸ್ ಮನ್ರೋ ಅವರು ಜಾರಿಗೆ ತಂದರು.

16. 'ರೈತವಾರಿ ಪದ್ಧತಿ'ಯ ಪ್ರಕಾರ ವಸೂಲು ಮಾಡುತ್ತಿದ್ದ ಭೂಕಂದಾಯದ ಪ್ರಮಾಣ- ಉತ್ಪನ್ನದ ಶೇಕಡ 50

17. ಮಹಲ್' ಎಂದರೆ ಗ್ರಾಮ ಅಥವಾ ಎಸ್ಟೇಟ್' ಎಂದರ್ಥ.

18. ಭಾರತದಲ್ಲಿ 1 ವರ್ಷಕ್ಕೆ 1 ಲಕ್ಷ ರೂ.ಗಳನ್ನು ಶಿಕ್ಷಣಕ್ಕಾಗಿ ಖರ್ಚು ಮಾಡಬೇಕೆಂದು ನಿರ್ದೇಶಿಸಿದ ಶಾಸನ -1813ರ ಚಾರ್ಟರ್ ಕಾಯ್ದೆ

19. 1785 ರಲ್ಲಿ ಭಗವದ್ಗೀತೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿದವರು

- ಸರ್ ಚಾರ್ಲ್ಸ್, ವಿಲ್ಕಿನ್ಸ್

20. 1854ರಲ್ಲಿ ಬ್ರಿಟಿಷರು ಭಾರತಕ್ಕೆ ಹೊಸ ಶಿಕ್ಷಣ ನೀತಿಯನ್ನು ರೂಪಿಸಿದರು ಇದು ಯಾರ ವರದಿಯನ್ನು ಆಧರಿಸಿತ್ತು

-ಚಾರ್ಲ್ಸ್ ವುಡ್

21. ಹೊಸ ಶಿಕ್ಷಣ ನೀತಿಯನ್ನು ಜಾರಿಗೊಳಿಸಿದವರು

- ಲಾರ್ಡ್ ಮೆಕಾಲೆ ಮತ್ತು ಚಾರ್ಲ್ಸ್ ವುಡ್,

22. 1857ರಲ್ಲಿ ಸ್ಥಾಪನೆಗೊಂಡ ಭಾರತೀಯ ವಿಶ್ವವಿದ್ಯಾಲಯಗಳು ಯಾವುವು

- ಕಲ್ಕತ್ತ, ಮುಂಬೈ ಮತ್ತು ಮದ್ರಾಸ್



Scanned with OKEN Scanner

**23. ಕೆಳಗಿನ ಹೇಳಿಕೆಗಳನ್ನು ಗಮನಿಸಿ**

**A.ಬ್ರಿಟಿಷ್ ಆಳ್ವಿಕೆಯ ವೇಳೆ ಭಾರತವು ಬಡ ರಾಷ್ಟ್ರವಾಗಿ ಮಾರ್ಪಾಡುಗೊಳ್ಳಲು ಮುಖ್ಯ ಕಾರಣವೆಂದರೆ ದೇಶದ ಸಂಪತ್ತು ಇಂಗ್ಲೆಂಡಿಗೆ ಸೋರಿ ಹೋದದ್ದು.**

**B.ಇಂಗ್ಲೆಂಡಿಗೆ ಹಣ ರವಾನೆಯು ಇವರು ಹೇಳುವಂತೆ ಸಂಪತ್ತಿನ ಸೋರಿಕೆಗೆ (drain of wealth) ಮುಖ್ಯ ಕಾರಣವಾಗಿತ್ತು.**

**ಈ ಮೇಲಿನ ಹೇಳಿಕೆಗಳು ಸಂಬಂಧಿಸಿರುವುದು**

- **ದಾದಾಬಾಯಿ ನವರೋಜಿ**

**24. 'ಅರ್ಥಶಾಸ್ತ್ರದ ಪಿತಾಮಹ' ಆಡಂ ಸ್ಮಿತ್ ಭಾರತದಲ್ಲಿ ಆಳ್ವಿಕೆ ನಡೆಸುತ್ತಿದ್ದ ಬ್ರಿಟಿಷರನ್ನು ಏನೆಂದು ಬಣ್ಣಿಸಿದ್ದಾನೆ.**

**- ಸುಲಿಗೆಕೋರರು**

NAVACHETANA EDUCATIONS
7019752139



Scanned with OKEN Scanner

Navachethana education YouTube & telegram channel Copy Rights Reserve

7019752139

# ಭೂಗೋಳ ವಿಜ್ಞಾನ

## ಭಾರತದ ಪ್ರಾಕೃತಿಕ ವಿಭಾಗಗಳು

**1. ಭಾರತದ ಭೌಗೋಳಿಕ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**

A.ಭಾರತವು ಸಂಪೂರ್ಣವಾಗಿ ಉತ್ತರಗೋಳಾರ್ಧ ನೆಲೆಸಿದೆ. ಇದೊಂದು ದಕ್ಷಿಣ ಏಷ್ಯಾದ ಪರ್ಯಾಯ ದ್ವೀಪ, ಭಾರತವು ವಿಸ್ತೀರ್ಣದಲ್ಲಿ ಪ್ರಪಂಚದ 7ನೆಯ ಸ್ಥಾನದಲ್ಲಿದೆ ಹಾಗೂ ಎರಡನೆಯ ಜನಭರಿತ ರಾಷ್ಟ್ರ ☑

B. ಇದು ಉತ್ತರದ ಕಾಶ್ಮೀರದಿಂದ ದಕ್ಷಿಣದ ಕನ್ಯಾಕುಮಾರಿ ಭೂಶಿರದವರೆಗೆ ಹಾಗೂ ಪಶ್ಚಿಮದ ಕಛ್ ನಿಂದ ಪೂರ್ವದ ಅರುಣಾಚಲ ಪ್ರದೇಶದವರೆಗೆ ವಿಸ್ತರಿಸಿದೆ.☑

C.ಅಕ್ಷಾಂಶಿಕವಾಗಿ 8° ಉತ್ತರದಿಂದ 37° ಉತ್ತರ ಅಕ್ಷಾಂಶ ಹಾಗೂ ರೇಖಾಂಶಿಕವಾಗಿ 68° ಪೂರ್ವ ದಿಂದ 97° ಪೂರ್ವ ರೇಖಾಂಶಗಳವರೆಗೆ ವಿಸ್ತರಿಸಿದೆ.☑

D.ಕರ್ಕಾಟಕ ಸಂಕ್ರಾಂತಿ ವೃತ್ತವು ದೇಶದ ಮಧ್ಯಭಾಗದಲ್ಲಿ ಹಾಯ್ದು ಹೋಗಿದೆ.☑

ಮೇಲಿನ ಎಲ್ಲವೂ ಸರಿಯಾಗಿದೆ

**2. ಭಾರತದ ನೆರೆಹೊರೆಯ ದೇಶಗಳೆಂದರೆ,**

- ವಾಯವ್ಯಕ್ಕೆ - ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ,
- ಉತ್ತರಕ್ಕೆ - ನೇಪಾಳ, ಭೂತಾನ ಮತ್ತು ಚೀನಾ



Scanned with OKEN Scanner

Navachethana education YouTube & telegram channel Copy Rights Reserve

❖ ಪೂರ್ವಕ್ಕೆ - ಬಾಂಗ್ಲಾದೇಶ ಮತ್ತು ಮಯನ್ಮಾರ್ ದೇಶಗಳಿವೆ,

❖ ಆಗ್ನೇಯ ದಿಕ್ಕಿನಲ್ಲಿ - ಶ್ರೀಲಂಕಾ

3. ಪಾಕ್ ಜಲಸಂಧಿ ಮತ್ತು ಮನ್ನಾರ್ ಖಾರಿಗಳಿಂದ ಭಾರತದಿಂದ ಪ್ರತ್ಯೇಕಗೊಂಡಿರುವ ನೆರೆಹೊರೆ ರಾಷ್ಟ್ರ - ಶ್ರೀಲಂಕಾ

4. ಭಾರತವನ್ನು ಸುತ್ತುವರಿದ ಜಲ ಭಾಗಗಳೆಂದರೆ

- ಪೂರ್ವಕ್ಕೆ - ಬಂಗಾಳಕೊಲ್ಲಿ
- ಪಶ್ಚಿಮಕ್ಕೆ - ಅರಬ್ಬಿ ಸಮುದ್ರ
- ದಕ್ಷಿಣಕ್ಕೆ - ಹಿಂದೂ ಮಹಾಸಾಗರ

ಭಾರತವು ಉದ್ದವಾದ ಸಮುದ್ರ ತೀರ ಮತ್ತು ದ್ವೀಪಗಳನ್ನು ಹೊಂದಿದೆ.

ಭಾರತದಲ್ಲಿ 28 ರಾಜ್ಯಗಳು, 9 ಕೇಂದ್ರಾಡಳಿತ ಪ್ರದೇಶಗಳು ಮತ್ತು ದೆಹಲಿಯು ರಾಷ್ಟ್ರೀಯ ರಾಜಧಾನಿ ಪ್ರದೇಶವಾಗಿದೆ.

## ಭಾರತದ ಪ್ರಾಕೃತಿಕ ವಿಭಾಗಗಳು

1. ಉತ್ತರದ ಪರ್ವತಗಳು :-

- ಇದು ಬಹಳಷ್ಟು ಮಟ್ಟಿಗೆ ಹಿಮಾಲಯ ಪರ್ವತ ಸರಣಿಗಳನ್ನೊಳಗೊಂಡಿದೆ.



Scanned with OKEN Scanner

Navachethana education YouTube & telegram channel Copy Rights Reserve

- ದೇಶದ ಉತ್ತರ, ಈಶಾನ್ಯ ಮತ್ತು ಪೂರ್ವಭಾಗಗಳಿಗೆ ಹಿಮಾಲಯಗಳು ನೈಸರ್ಗಿಕ ಗಡಿಯಂತಿವೆ. ಇವು ಪ್ರಪಂಚದಲ್ಲೇ ಅತ್ಯಂತ ಎತ್ತರವಾದ ಪರ್ವತಗಳಾಗಿದ್ದು, ಹಿಮದಿಂದಾವೃತವಾಗಿವೆ.
- ಅವುಗಳಲ್ಲಿ ಹಲವು ಅತ್ಯಂತ ಎತ್ತರವಾದ ಶಿಖರ, ಆಳವಾದ ಕಣಿವೆ ಕಂದರ, ಹಿಮನದಿ, ಪರ್ವತ ಘಾಟಿ ಮೊದಲಾದ ಸ್ವರೂಪಗಳಿವೆ

◈ ಪ್ರಪಂಚದಲ್ಲಿ ಅತ್ಯಂತ ಎತ್ತರವಾದ ಶಿಖರ - ಮೌಂಟ್ ಎವರೆಸ್ಟ್ (8848 ಮೀ. )

◈ ಭಾರತದ ಅತ್ಯಂತ ಎತ್ತರವಾದ ಶಿಖರ - ಕೆ2 ಅಥವಾ ಮೌಂಟ್ ಗಾಡ್ವಿನ್ ಆಸ್ಟಿನ್ (8611 ಮೀ. )

## 2. ಉತ್ತರದ ಮೈದಾನಗಳು :-

- ಇವು ಹಿಮಾಲಯ ಪರ್ವತ ಮತ್ತು ಪರ್ಯಾಯ ಪ್ರಸ್ಥಭೂಮಿಗಳ ನಡುವೆ ವಿಸ್ತರಿಸಿವೆ.
- ಹಿಮಾಲಯ ಪರ್ವತಗಳಲ್ಲಿ ಉಗಮ ಹೊಂದಿ ಇಲ್ಲಿ ಹರಿಯುವ ಸಟ್ಲೇಜ್, ಗಂಗಾ, ಬ್ರಹ್ಮಪುತ್ರ ಮತ್ತು ಅವುಗಳ ಉಪ ನದಿಗಳು ತಂದು ಸಂಚಯ ಮಾಡಿದ ಮೆಕ್ಕಲಿನಿಂದ ಇವು ನಿರ್ಮಾಣವಾಗಿವೆ. ಇವು ಫಲವತ್ತಾದ, ವಿಸ್ತಾರವಾದ ಹಾಗೂ ಸಮತಟ್ಟಾದ ಮೈದಾನಗಳಾಗಿವೆ.

◈ ಉತ್ತರ ಮೈದಾನ ಈ ನದಿಗಳ ಸಂಚಯ ಕಾರ್ಯದಿಂದ ನಿರ್ಮಾಣಗೊಂಡಿದೆ. - ಸಟ್ಲೇಜ್ , ಗಂಗಾ, ಬ್ರಹ್ಮಪುತ್ರಾ



Scanned with OKEN Scanner

Navachethana education YouTube & telegram channel Copy Rights Reserve

❖ ಉತ್ತರ ಮಹಾ ಮೈದಾನವು ಈ ಮಣ್ಣಿನಿಂದ ರಚನೆಯಾಗಿದೆ

- ಮೆಕ್ಕಲು ಮಣ್ಣು

3. ಪರ್ಯಾಯ ಪ್ರಸ್ಥಭೂಮಿ:-

- ಭಾರತದ ಪ್ರಾಕೃತಿಕ ವಿಭಾಗಗಳಲ್ಲಿ ಇದು ಹೆಚ್ಚು ವಿಸ್ತಾರವಾದುದು,
- ಉತ್ತರ ಭಾರತದ ಮೈದಾನದಿಂದ ದಕ್ಷಿಣ ಭಾಗದಲ್ಲಿದ್ದು ಬಹುಪಾಲು ಪುರಾತನ ಕಠಿಣವಾದ ಶಿಲೆಗಳಿಂದ ರಚನೆಯಾಗಿದೆ.
- ನರ್ಮದಾ-ಸೋನೆ ಸೀಳು ಕಣಿವೆಯು ಈ ವಿಭಾಗವನ್ನು ಎರಡು ಭಾಗಗಳಾಗಿ ವಿಂಗಡಿಸುತ್ತದೆ.

❖ ಇದರಿಂದ ಉತ್ತರದ ಭಾಗವನ್ನು ಮಾಳ್ವ ಪ್ರಸ್ಥಭೂಮಿ' ಎಂತಲೂ ಮತ್ತು ದಕ್ಷಿಣದ ಭಾಗವನ್ನು ದಖನ್ ಪ್ರಸ್ಥಭೂಮಿ ಎಂತಲೂ ಕರೆಯಲಾಗಿದೆ.

❖ ಅರಾವಳಿ ಸರಣಿಯ ಎತ್ತರದ ಪರ್ವತ ಯಾವುದು- ಗುರುಶಿಖರ

❖ ದಕ್ಷಿಣ ಭಾರತದ ಅತಿ ಎತ್ತರವಾದ ಶಿಖರ ಯಾವುದು

- ಅನೈಮುಡಿ



Scanned with OKEN Scanner

Navachethana education YouTube & telegram channel Copy Rights Reserve

## 4. ಕರಾವಳಿ ಮೈದಾನಗಳು :

- ಪರ್ಯಾಯ ಪ್ರಸ್ಥಭೂಮಿಯ ಎರಡೂ ಬದಿ(ಪಕ್ಕ)ಗಳು ಕರಾವಳಿ ಮೈದಾನಗಳಿಂದ ಆವರಿಸಿದೆ, ಅದನ್ನು ಪಶ್ಚಿಮ ತೀರ ಮೈದಾನ ಮತ್ತು ಪೂರ್ವ ತೀರ ಮೈದಾನವೆಂದು ವಿಂಗಡಿಸಬಹುದು.

🔷ಪಶ್ಚಿಮ ಕರಾವಳಿಯು ಅರಬ್ಬಿ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಇದೆ. ಇದು ಕಲ್ (ಉತ್ತರ)ನಿಂದ ಕನ್ಯಾಕುಮಾರಿ ಭೂಶಿರ(ದಕ್ಷಿಣ)ದ ವರೆಗೆ ವಿಸ್ತರಿಸಿದೆ. ಇದು ನೇರವಾಗಿದ್ದು, ಕಿರಿದಾದ ಶಿಲಾರಚಿತ ಸ್ವರೂಪವುಳ್ಳದ್ದು.

🔷ಪೂರ್ವ ಕರಾವಳಿಯು ಬಂಗಾಳಕೊಲ್ಲಿ ಮತ್ತು ಪೂರ್ವ ಘಟ್ಟಗಳ ಮಧ್ಯೆ, ಉತ್ತರದಲ್ಲಿ ಗಂಗಾ ನದಿಮುಖಜದಿಂದ ದಕ್ಷಿಣದಲ್ಲಿ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ. ಇದು ಅಗಲವಾಗಿದೆ, ಪೂರ್ವ ಮತ್ತು ಪಶ್ಚಿಮ ಕರಾವಳಿಗಳಲ್ಲಿ ಪ್ರಮುಖ ಬಂದರುಗಳಿವೆ.

## ದ್ವೀಪಗಳು

- ಭಾರತದ ಪ್ರಾಂತೀಯ ಜಲರಾಶಿಗಳಲ್ಲಿ **247 ದ್ವೀಪಗಳಿವೆ.** ಅವುಗಳಲ್ಲಿ **204** ಬಂಗಾಳಕೊಲ್ಲಿಯಲ್ಲಿವೆ. ಅವುಗಳನ್ನು ಅಂಡಮಾನ್-ನಿಕೋಬಾರ್ ದ್ವೀಪಗಳೆಂದು ಕರೆಯಲಾಗಿದೆ
- ಉಳಿದ **43** ದ್ವೀಪಗಳು ಅರಬ್ಬಿ ಸಮುದ್ರದಲ್ಲಿ ಇದೆ ಅವುಗಳನ್ನು ಲಕ್ಷದ್ವೀಪಗಳು ಎನ್ನುವರು



Scanned with OKEN Scanner

Navachethana education YouTube & telegram channel Copy Rights Reserve

- ಅಂಡಮಾನ್ ನಿಕೋಬಾರ್ ದ್ವೀಪಗಳು ಜ್ವಾಲಾಮುಖಿಜನಿತ ಗಟ್ಟಿಶಿಲೆಗಳಿಂದ ರಚನೆಯಾಗಿವೆ
- ಲಕ್ಷದ್ವೀಪಗಳು ಹವಳ ದಿಣ್ಣೆಗಳಿಂದ ನಿರ್ಮಾಣವಾಗಿದೆ

### ಮರುಭೂಮಿ

ಭಾರತದಲ್ಲೊಂದು ಮರುಭೂಮಿಯಿದೆ.ಅದನ್ನು ಥಾರ್ ಮರುಭೂಮಿ'ಎನ್ನುವರು.

- ಇದು ಭಾರತದ ವಾಯವ್ಯ ಭಾಗದಲ್ಲಿ ವಿಸ್ತರಿಸಿದೆ. ಇದರ ವಿಸ್ತೀರ್ಣದಲ್ಲಿ ಮೂರನೇ ಎರಡು ಭಾಗ ರಾಜಸ್ತಾನದಲ್ಲಿದೆ. ಉಳಿದ ಭಾಗವು ಪಂಜಾಬ್, ಹರಿಯಾಣ ಮತ್ತು ಗುಜರಾತ್ ರಾಜ್ಯಗಳಲ್ಲಿ ಹರಡಿದೆ.
- ಮರುಭೂಮಿಯಲ್ಲಿ ಕೆಲವು ಉಪ್ಪಿನ ಸರೋವರಗಳು ಕಂಡುಬರುತ್ತವೆ. ಅವುಗಳಿಗೆ ಕರ್ನಾಟಕ ರಾಜ್ಯ "ಪ್ಲಾಯಾ'ಎನ್ನುವರು.

### ಭಾರತದ ಅತಿ ವಿಸ್ತಾರವಾದ ಉಪ್ಪಿನ ಸರೋವರ

- ಸಾಂಬಾರ್ ಸರೋವರ

**2. ಕರ್ನಾಟಕದ ಭೌಗೋಳಿಕ ಸನ್ನಿವೇಶಕ್ಕೆ ಸಂಬಂಧಿಸಿದಂತೆ ಸರಿಯಾದ ಹೇಳಿಕೆಯನ್ನು ಗುರುತಿಸಿ**

**A.** ನಮ್ಮ ರಾಜ್ಯವಾದ ಕರ್ನಾಟಕವು ಭಾರತದ ನೈಋತ್ಯ ಭಾಗದಲ್ಲಿದೆ.ವಿಸ್ತೀರ್ಣದಲ್ಲಿ ಭಾರತದ ರಾಜ್ಯಗಳಲ್ಲಿ ಇದು 8ನೆಯ ದೊಡ್ಡ ರಾಜ್ಯ.☑



Scanned with OKEN Scanner

Navachethana education YouTube & telegram channel Copy Rights Reserve

B.ಇದು 11 ° ಮತ್ತು 18° ಉತ್ತರ ಆಕ್ಷಾಂಶ ಹಾಗೂ 74° ಮತ್ತು 78° ಪೂರ್ವ ರೇಖಾಂಶ ನಡುವೆ ವಿಸ್ತರಿಸಿದೆ.☑

A& B ಎರಡೂ ಸರಿಯಾಗಿದೆ

3. ನಮ್ಮ ರಾಜ್ಯವು ಜಲ ಮತ್ತು ನೆಲ ಮೇರೆಗಳೆರಡನ್ನೂ ಹೊಂದಿದೆ.

- ಉತ್ತರದಲ್ಲಿ - ಮಹಾರಾಷ್ಟ್ರ,
- ಪೂರ್ವ ದಿಕ್ಕಿನಲ್ಲಿ - ಆಂಧ್ರ ಮತ್ತು ತೆಲಂಗಾಣ
- ನೈಋತ್ಯದಲ್ಲಿ - ಕೇರಳ ರಾಜ್ಯಗಳಿವೆ. ಪಶ್ಚಿಮದಲ್ಲಿ ಸಮುದ್ರವಿದೆ,

◈ ರಾಜ್ಯದಲ್ಲಿ 31 ಜಿಲ್ಲೆ ಮತ್ತು 227 ತಾಲ್ಲೂಕುಗಳಿವೆ.

◈ ಕರಾವಳಿ ಪ್ರದೇಶ :

- ಇದು ಕರ್ನಾಟಕದ ಪಶ್ಚಿಮ ಭಾಗ, ಮಲೆನಾಡು ಮತ್ತು ಅರಬೀ ಸಮುದ್ರಗಳ ನಡುವೆ ಕಂಡುಬರುತ್ತದೆ,
- ಇದು ಉತ್ತರದಲ್ಲಿ ಗೋವಾ ತೀರದಿಂದ ದಕ್ಷಿಣದಲ್ಲಿ ಕೇರಳ ತೀರದವರೆಗೆ (324 ಕಿ.ಮೀ.) ವ್ಯಾಪಿಸಿದೆ.
- ಇದರಲ್ಲಿ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಸಮುದ್ರ ತೀರಗಳು ಸೇರಿವೆ.

◈ ಕರ್ನಾಟಕದ ಹೆಬ್ಬಾಗಿಲು - ನವಮಂಗಳೂರು



Scanned with OKEN Scanner

Navachethana education YouTube & telegram channel Copy Rights Reserve

### ಮಲೆನಾಡು :

- ಇದು ಗುಡ್ಡಕಾಡು ಪ್ರದೇಶವಾಗಿದ್ದು, ಕರಾವಳಿ ಮತ್ತು ಮೈದಾನಗಳ ನಡುವೆ ವಿಸ್ತರಿಸಿದೆ.

  ಇದನ್ನು 'ಸಹ್ಯಾದ್ರಿ ಸರಣಿಗಳು' ಎಂತಲೂ ಕರೆಯುವುದು ಜನಪ್ರಿಯವಾಗಿದೆ. ಇದೊಂದು ಕರ್ನಾಟಕದ ಅತಿ ಪ್ರಮುಖ ಪ್ರಾಕೃತಿಕ ವಿಭಾಗ

  - ರಾಜ್ಯದಲ್ಲೇ ಅತಿ ಹೆಚ್ಚು ಮಳೆ ಬೀಳುವ 'ಆಗುಂಬೆ' ಈ ವಿಭಾಗದಲ್ಲಿದೆ.
  - ಕೆಲವು ಎತ್ತರವಾದ ಬೆಟ್ಟಗಳೂ ಇವೆ. ಅವುಗಳಲ್ಲಿ ಒಂದಾದ 'ಮುಳ್ಳಯ್ಯನಗಿರಿ' (1913 ಮೀ.) ರಾಜ್ಯದಲ್ಲೇ ಎತ್ತರವಾದುದು.

### ಮೈದಾನ ಪ್ರದೇಶ:

- ಇದು ಮಲೆನಾಡಿನಿಂದ ಪೂರ್ವ ಭಾಗದಲ್ಲಿದ್ದು, ಏರುದಿಣ್ಣೆಗಳಿಂದ ಕೂಡಿದ ಮೇಲೆ ಲಕ್ಷಣಗಳನ್ನು ಹೊಂದಿದೆ.
- ಇದನ್ನು ಈ ಪ್ರದೇಶದ ಮಧ್ಯ ಭಾಗದಲ್ಲಿ ಹರಿಯುವ ತುಂಗಭದ್ರಾ ನದಿಯನ್ನಾಧರಿಸಿ ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಅವುಗಳೆಂದರೆ: ಉತ್ತರ ಮೈದಾನ ಮತ್ತು ದಕ್ಷಿಣ ಮೈದಾನ

### ಉತ್ತರ ಮೈದಾನ:

- ಸಮತಟ್ಟಾದ ಮೇಲ್ಮೈವುಳ್ಳ ವಿಶಾಲವಾದ ಪ್ರಸ್ಥಭೂಮಿ ಅಲ್ಲಲ್ಲಿ ಕೆಲವು ಚಪ್ಪಟೆ ಮೇಲ್ತುದಿಯನ್ನುಳ್ಳ ಬೆಟ್ಟಗಳಿವೆ.



Scanned with OKEN Scanner

Navachethana education YouTube & telegram channel Copy Rights Reserve

- ಈ ಮೈದಾನದ ಭಾಗವು ಬಸಾಲ್ಟ್ ಶಿಲೆಗಳಿಂದ ರಚಿತವಾಗಿದ್ದು, ಕಪ್ಪು ಮಣ್ಣಿನಿಂದ ಆವರಿಸಿದೆ.
- ಇದು ಪೂರ್ವದ ಕಡೆಗೆ ಇಳಿಜಾರು ಹೊಂದಿದೆ ಇದನ್ನು ಅನುಸರಿಸಿ ಕೃಷ್ಣಾ ಮತ್ತು ಭೀಮಾ ನದಿಗಳು ಹರಿಯುತ್ತವೆ.
- ಉತ್ತರ ಮೈದಾನವು ಅತಿ ಕಡಿಮೆ ಮಳೆಯನ್ನು ಪಡೆಯುತ್ತದೆ.

### ದಕ್ಷಿಣ ಮೈದಾನ :

- ಇದನ್ನು ಮೈಸೂರು ಪ್ರಸ್ಥಭೂಮಿ ಎಂದು ಕರೆಯಲಾಗಿದೆ. ಇದು ಸಾಕಷ್ಟು ಏರುದಿಣ್ಣೆಗಳನ್ನುಳ್ಳ ಮೇಲೆ ಲಕ್ಷಣ ಹಾಗೂ ಬೆಟ್ಟಗಳ ಸಾಲುಗಳನ್ನು ಹೊಂದಿದೆ,
- ಅವುಗಳೆಂದರೆ : ಬಿಳಿಗಿರಿರಂಗನ ಬೆಟ್ಟ, ಮಲೆಮಹಾದೇಶ್ವರ ಬೆಟ್ಟ, ನಂದಿ ಬೆಟ್ಟ, ಚಾಮುಂಡಿ ಬೆಟ್ಟ ಮೊದಲಾದವು. ಉತ್ತರ ಮೈದಾನದಂತೆ ಇದೂ ಸಹ ಪೂರ್ವದ ಕಡೆಗೆ ಇಳಿಜಾರಾಗಿದೆ, ಅದನ್ನನುಸರಿಸಿ ಕಾವೇರಿ ನದಿ ಹರಿಯುವುದು.
- ಈ ಪ್ರಾಕೃತಿಕ ವಿಭಾಗದ ಬಹುಭಾಗವು ಕೆಂಪು ಮಣ್ಣಿನಿಂದ ಕೂಡಿದೆ.
- ಉತ್ತರ ಮೈದಾನಕ್ಕಿಂತ ಈ ವಿಭಾಗದಲ್ಲಿ ಹೆಚ್ಚು ಮಳೆ ಬೀಳುವುದು.



Scanned with OKEN Scanner